Print

# Karnataka Lokayukta

**(Under Section 7 of the Karnataka Lokayukta Act, 1984)**

CASE NUMBER : **COMPT/LOK/MYS/1184/2019**

District : **Dakshina Kannada**

**BY :**

**1. SUO MOTO,**

As per the Order of Honble Lokayukta Dated: 25/04/2019

**COMPLAINANT/S**

**AGAINST :**

**1. DEPUTY COMMISSIONER,**

D.C. Office, Mangalore, Dakshina Kannada District.

**2. COMMISSIONER,**

Mangalore City Corporation, Mangalore, Dakshina Kannada District.

**3. T.G. GURUPRASAD,**

Tahasildar, Taluk Office, Mangalore Taluk, Dakshina Kannada District.

**4. JOSEPH WALGAT PIRERA ALIAS JOY,**

Revenue Inspector, Mangalore A Hobli, Dakshina Kannada District.

**5. RAMESH,**

Village Assistant, Office of the Revenue Inspector, Mangalore A Hobli, Dakshina Kannada District.

**RESPONDENT/S**

| | |
|---|---|
| **Allegation/Grievance Brief :** | Dereliction of Duty. |
| Received From : | By Misc/1467/2018/ARLO-4 Dated:23/05/2018 |
| Received On : | 30-04-2019 |

**Seal and Signature** 30.04.19

| | |
|---|---|
| **Complaint stands allotted to :** | **ARE-6** |

**SCRUTINY AND OPINION**

1184/2019

# KARNATAKA LOKAYUKTA : BENGALURU

No: Date: 25-04-2019

## ORDER

On the basis of a pseudonymous petition (filed by one Sri. M.S.Nayak and others, address nil) received on 23-05-2018, I had directed the Superintendent of Police, Karnataka Lokayukta, Mangaluru, to conduct an enquiry with regard to the allegations made in the petition and submit a report. Accordingly, the enquiry was conducted by the Police Inspector, Karnataka Lokayukta, Mangaluru and a report dated 21-03-2019 has been submitted by the Superintendent of Police, Karnataka Lokayukta, Mangaluru.

2. The grievance in the anonymous petition was that the properties situated within Mangaluru City Corporation were granted in the purported exercise of the power conferred under Sections 94-C and 94-CC of the Karnataka Land Revenue Act, 1964 to the persons who are totally ineligible for allotment of site/house and some of them appears to be Government servants and relations of the

(15) revenue officials. It is useful to extract the report submitted by the Superintendent of Police, Karnataka Lokayukta, Mangaluru, which reads as here under:

"ಕರ್ನಾಟಕ ಲೋಕಾಯುಕ್ತ ಮಂಗಳೂರು

ಸಂಖ್ಯೆ: 18/ಎಸ್.ಪಿ ಕಲೋ/ಮಂ/ಎ.ಆರ್.ಎಲ್.ಓ ಅರ್ಜಿ/2018

ಪೊಲೀಸ್ ಅಧೀಕ್ಷಕರ ಕಛೇರಿ,
ಪೊಲೀಸ್ ವಿಭಾಗ.
ಕರ್ನಾಟಕ ಲೋಕಾಯುಕ್ತ,
ಮಂಗಳೂರು
ದಿನಾಂಕ: 21-03-2019

ಇವರಿಗೆ

ಮಾನ್ಯ ಅಪರ ಪೊಲೀಸ್ ಮಹಾನಿರ್ದೇಶಕರು,
ಕರ್ನಾಟಕ ಲೋಕಾಯುಕ್ತ
ಬೆಂಗಳೂರು.

ಮಾನ್ಯರೇ,

**ವಿಷಯ :** ದಕ್ಷಿಣ ಕನ್ನಡ ಜಿಲ್ಲೆಯ, ಮಂಗಳೂರು ನಗರದ ಕೋಡಿಯಾಲ್ ಬೈಲ್, ಪದವು, ಜಪ್ಪಿನಮೊಗರು ವಸತಿ ಸ್ಥಳದಲ್ಲಿ ಮಂಗಳೂರು ತಾಲೂಕಿನ ಕಂದಾಯ ಅಧಿಕಾರಿಗಳು ಸರ್ಕಾರಿ ಜಮೀನನ್ನು ಕಾನೂನು ಬಾಹಿರವಾಗಿ 94ಸಿಸಿ ರಡಿಯಲ್ಲಿ ಅನರ್ಹ ಫಲಾನುಭವಿಗಳಿಗೆ ಮಂಜೂರು ಮಾಡಿ, ಹಕ್ಕುಪತ್ರ ವಿತರಿಸಿರುವ ಕುರಿತು ಸಲ್ಲಿಸಲಾದ ದೂರು ಅರ್ಜಿಯ ವಿಚಾರಣಾ ವರದಿ.

**ಉಲ್ಲೇಖ :** 1) ಸಂಖ್ಯೆ: ಇತರೆ/1467/2018 ಎಆರ್ಎಲ್ಓ-4/ಎಸ್.ಪಿ-5 ದಿನಾಂಕ 13-06-2018
2) ಪೊಲೀಸ್ ಅಧೀಕ್ಷಕರು-5, ಕ.ಲೋ ಬೆಂಗಳೂರು ರವರು ಜ್ಞಾಪನ ದಿನಾಂಕ 25-01-2019
3) ಭಾರತಿ, ಪಿ.ಐ, ಕಲೋ, ಮಂಗಳೂರುರವರ ವರದಿ ದಿ:21-03-2019

* * *

ಮೇಲ್ಕಾಣಿಸಿದ ವಿಷಯ ಮತ್ತು ಉಲ್ಲೇಖಕ್ಕೆ ಸಂಬಂಧಿಸಿದಂತೆ ನಿವೇದಿಸಿಕೊಳ್ಳುವುದೇನೆಂದರೆ, ದಕ್ಷಿಣ ಕನ್ನಡ ಜಿಲ್ಲೆಯ, ಮಂಗಳೂರು ನಗರದ ಕೋಡಿಯಾಲ್‌ಬೈಲ್, ಪದವು, ಜಪ್ಪಿನಮೊಗರು ವಸತಿ ಸ್ಥಳದಲ್ಲಿ ಮಂಗಳೂರು ತಾಲೂಕಿನ ಕಂದಾಯ ಅಧಿಕಾರಿಗಳು ಸರ್ಕಾರಿ ಜಮೀನನ್ನು ಕಾನೂನು

ಬಾಹಿರವಾಗಿ 94ಸಿಸಿ ರಡಿಯಲ್ಲಿ ಅನರ್ಹ ಫಲಾನುಭವಿಗಳಿಗೆ ಮಂಜೂರು ಮಾಡಿ, ಹಕ್ಕುಪತ್ರ ವಿತರಿಸಿದ್ದು, ಈ ಬಗ್ಗೆ ದಿನಾಂಕ: 13.06.2018 ರಂದು ಶ್ರೀ ಎಂ.ಎಸ್.ನಾಯಕ್ ಎಂಬುವರು ಗೌರವಾನ್ವಿತ ಲೋಕಾಯುಕ್ತರವರಿಗೆ ನೀಡಿದ ದೂರು ಅರ್ಜಿಯ ಸತ್ಯಾಂಶದ ಬಗ್ಗೆ ಗೌಪ್ಯ ವಿಚಾರಣೆ ನಡೆಸಿ ವರದಿಯನ್ನು ಕಳುಹಿಸುವ ಬಗ್ಗೆ ಮಾನ್ಯ ಅಪರ ಪೊಲೀಸ್ ಮಹಾನಿರ್ದೇಶಕರು, ಕರ್ನಾಟಕ ಲೋಕಾಯುಕ್ತ ಬೆಂಗಳೂರು ರವರು ಉಲ್ಲೇಖ(1) ರಲ್ಲಿ ಆದೇಶಿಸಿ ಕಳುಹಿಸಿ ಕೊಟ್ಟಿದ್ದು, ಅದರಂತೆ ಶ್ರೀಮತಿ ಭಾರತಿ, ಪೊಲೀಸ್ ನಿರೀಕ್ಷಕರು, ಕರ್ನಾಟಕ ಲೋಕಾಯುಕ್ತ ರವರು ವಿಚಾರಣೆ ನಡೆಸಿ ಸಲ್ಲಿಸಿರುವ ವರದಿಯನ್ನು ದಿನಾಂಕ 06-09-2018 ರಂದು ಕೇಂದ್ರ ಕಚೇರಿಗೆ ಕಳುಹಿಸಿಕೊಡಲಾಗಿರುತ್ತದೆ.

ಸದರಿ ವರದಿಯನ್ನು ಪರಿಶೀಲಿಸಿ ಪೊಲೀಸ್ ಅಧೀಕ್ಷಕರು-5, ಕರ್ನಾಟಕ ಲೋಕಾಯುಕ್ತ ಬೆಂಗಳೂರು ರವರು ವರದಿಯಲ್ಲಿನ ನ್ಯೂನತೆಗಳನ್ನು ಸರಿಪಡಿಸಿ, ದಾಖಲಾತಿಗಳನ್ನು ಸಂಗ್ರಹಿಸಿಕೊಂಡು ವರದಿಯನ್ನು ಸಲ್ಲಿಸುವಂತೆ ಉಲ್ಲೇಖ (2) ರಂತೆ ಸೂಚಿಸಿದ್ದು, ಅದರಂತೆ ಪೊಲೀಸ್ ನಿರೀಕ್ಷಕರು ಮತ್ತು ಸಿಬ್ಬಂಧಿಯವರು ಸದರಿ ದೂರಿನ ಸ್ಥಳಕ್ಕೆ ಭೇಟಿ ನೀಡಿ ಭೌತಿಕವಾಗಿ ಪರಿಶೀಲನೆ ನಡೆಸಿದ ಸಮಯ ಕಂಡುಬಂದ ಅಂಶಗಳಿಂದ, ಸ್ಥಳೀಯರನ್ನು ವಿಚಾರಿಸಿಕೊಂಡು, ಭಾತ್ಮಿದಾರರಿಂದ ಸಂಗ್ರಹಿಸಿರುವ ಮಾಹಿತಿಯ ಆಧಾರದಿಂದ, ಸ್ಥಳದ ಸರ್ವೆ/ಅಳತೆಯಿಂದ, ಮತ್ತು ಸಂಬಂದಿಸಿದ ಇಲಾಖೆಯಿಂದ ಪಡೆದುಕೊಂಡಿರುವ ದಾಖಲಾತಿಗಳನ್ನು ಕೂಲಂಕುಷವಾಗಿ ಪರಿಶೀಲಿಸಿಕೊಂಡು ದಿನಾಂಕ 21-03-2019 ರಂದು ವಿಚಾರಣಾ ವರದಿಯನ್ನು ಸಲ್ಲಿಸಿದ್ದು, ಇದರ ವಿವರ ಈ ಕೆಳಗಿನಂತಿದೆ.

ಸದರಿ ದೂರು ಅರ್ಜಿಗೆ ಸಂಬಂಧಿಸಿದಂತೆ ದಾಖಲಾತಿಗಳ ಪರಿಶೀಲನೆಯಿಂದ, ಸಾಕ್ಷಿದಾರರುಗಳ ವಿಚಾರಣೆಯಿಂದ, ಹಾಗೂ ಸ್ಥಳ ಪರಿಶೀಲನೆಯಿಂದ ಶ್ರೀಮತಿ ಸೌಮ್ಯ ಆರ್ ಎನ್ ಕೋಂ ಶಿವಪ್ಪ ಗೌಡ ಉಪ್ಪಿನಂಗಡಿ ಕೆಮ್ಮಾಯಿ ಚಿಕ್ಕಮುಡ್ನೂರು ಪುತ್ತೂರು ತಾಲೂಕು ಎಂಬಲ್ಲಿನ ನಿವಾಸಿಯಾಗಿದ್ದು, ಮಂಗಳೂರು ತಾಲೂಕು 89ಎ ಕೋಡಿಯಾಲ್‌ಬೈಲ್ ಗ್ರಾಮದಲ್ಲಿ ಸರ್ವೆ ನಂ 1554/2ಬಿ ರಲ್ಲಿ ಮತ್ತು ಪದವು ಗ್ರಾಮದ ಸರ್ವೆ ನಂ 196/1ಬಿ1 ರಲ್ಲಿ ವಾಸ್ತವ್ಯದ ಮನೆ ಇಲ್ಲದಿದ್ದರೂ, ಮನೆ ಇರುವುದಾಗಿ ಸುಳ್ಳು ಮಾಹಿತಿ ಮತ್ತು ದಾಖಲಾತಿಗಳನ್ನು ಸಲ್ಲಿಸಿ, 94ಸಿಸಿ ರಡಿಯಲ್ಲಿ ಅಕ್ರಮವಾಗಿ ಎರಡು ಕಡೆಗಳಲ್ಲಿ ಹಕ್ಕುಪತ್ರವನ್ನು ಪಡೆದುಕೊಂಡಿರುತ್ತಾರೆ. ಶ್ರೀಮತಿ ಸೌಮ್ಯ ಆರ್ ಎನ್ ಎಂಬವರು ಎರಡು ಕಡೆಗಳಲ್ಲಿ 94ಸಿಸಿ ರಂತೆ ಹಕ್ಕುಪತ್ರವನ್ನು ಪಡೆದಿರುವುದಲ್ಲದೇ, 2019ನೆ ಸಾಲಿನಲ್ಲಿ ಸುಳ್ಳು ವಿಳಾಸ ನೀಡಿ ಸರಕಾರಿ ಜಮೀನನ್ನು ಅಕ್ರಮವಾಗಿ ಪಡೆದುಕೊಳ್ಳುವ ದುರುದ್ದೇಶದಿಂದ 94ಸಿಸಿ ರಡಿಯಲ್ಲಿ ಎರಡು ಅರ್ಜಿಯನ್ನು ಸಲ್ಲಿಸಿರುತ್ತಾರೆ.

ಶ್ರೀಮತಿ ಸೌಮ್ಯ ಆರ್ ಎನ್ ಎಂಬವರ ಗಂಡ ರಮೇಶ್ ಎಂಬವರು ಗ್ರಾಮ ಸಹಾಯಕರಾಗಿದ್ದು, ಪ್ರಸ್ತುತ ಮಂಗಳೂರು ತಾಲೂಕು ಮಂಗಳೂರು ಎ ಹೋಬಳಿಯ ಕಂದಾಯ ನಿರೀಕ್ಷಕರಾದ ಜೋಸೆಪ್ ವಾಲ್ಗಾಟ್ ಪಿರೇರಾ ರವರ ಕಚೇರಿಯಲ್ಲಿ ಕರ್ತವ್ಯವನ್ನು ನಿರ್ವಹಿಸಿಕೊಂಡಿರುತ್ತಾರೆ. ರಮೇಶ್ ರವರು ಸರಕಾರಿ ಜಮೀನನ್ನು ಅಕ್ರಮವಾಗಿ ಕಬಳಿಸುವ ಉದ್ದೇಶದಿಂದ ತನ್ನ ಹೆಂಡತಿ ಶ್ರೀಮತಿ ಸೌಮ್ಯ ಆರ್ ಎನ್, ಅಣ್ಣ ಮೋಹನ್ ಗೌಡ, ಅತ್ತಿಗೆ ನಮಿತ ಎಂ ಗೌಡ ರವರುಗಳ ಹೆಸರಿನಲ್ಲಿ ಮತ್ತು 94 ಸಿಸಿ ಫಲಾನುಭವಿಯಾದ ಶ್ರೀಮತಿ ಪ್ರೀತಿ ಡಿನ್ನಾ ಪಿರೇರಾ ಪ್ರಾಯ 45 ವರ್ಷ ಗಂಡ: ಲ್ಯಾನ್ಸಿ ಪಿರೇರಾ ವಾಸ: ಸೂರಿಕುಮೇರು ಮನೆ, ಮಾಣಿ ಗ್ರಾಮ, ಬಂಟ್ವಾಳ ತಾಲೂಕು ಎಂಬವರು ಪ್ರಸ್ತುತ ಬಂಟ್ವಾಳ ತಾಲೂಕು ಮಾಣಿ ಗ್ರಾಮ ಪಂಚಾಯತಿನ ಸದಸ್ಯರಾಗಿದ್ದು, ಮತ್ತು ಅಲ್ಲಿನ ನಿವಾಸಿಯಾಗಿರುತ್ತಾರೆ. ಸದರಿಯವರು ಮಂಗಳೂರಿನಲ್ಲಿ ವಾಸವಿಲ್ಲದಿದ್ದರೂ ಕೂಡಾ ವಾಸ್ತವ್ಯ ಇರುವುದಾಗಿ ಸುಳ್ಳು

ದಾಖಲಾತಿಗಳನ್ನು ಸಲ್ಲಿಸಿ ಕೋಡಿಯಾಲ್ ಬೈಲ್‌ನಲ್ಲಿ ಮತ್ತು ಪದವು ಗ್ರಾಮಗಳಲ್ಲಿ 94ಸಿಸಿ ರಡಿಯಲ್ಲಿ ಎರಡು ಹಕ್ಕುಪತ್ರಗಳನ್ನು ಪಡೆದುಕೊಂಡಿರುತ್ತಾರೆ. ಅಲ್ಲದೇ ತನ್ನ ಮಗ ಲ್ಯಾನ್ವಿ ಪ್ರಜ್ವಲ್ ಪಿರೇರಾ ಪ್ರಾಯ 24 ವರ್ಷದವನಾಗಿದ್ದು, ಪ್ರಸ್ತುತ ವಿದೇಶದಲ್ಲಿದ್ದು, ಜಪ್ಪಿನಮೊಗರು ಎಂಬಲ್ಲಿ 94ಸಿಸಿ ರಡಿಯಲ್ಲಿ ಹಕ್ಕುಪತ್ರ ಪಡೆಯುವರೇ ಅರ್ಜಿ ಸಲ್ಲಿಸಿರುವುದು ದಾಖಲಾತಿಯಿಂದ ಕಂಡುಬರುತ್ತದೆ. ಪ್ರೀತಿ ಡಿನ್ನಾ ಪಿರೇರಾ ಮತ್ತು ಲ್ಯಾನ್ವಿ ಪ್ರಜ್ವಲ್ ಪಿರೇರಾ ರವರು ಮಂಗಳೂರು ಎ ಹೋಬಳಿಯ ಕಂದಾಯ ನಿರೀಕ್ಷಕರಾದ ಜೊಸೆಫ್ ವಾಲ್ಗಾಟ್ ಪಿರೇರಾ ರವರ ಅಕ್ಕ ಮತ್ತು ಅಳಿಯನಾಗುರುತ್ತಾರೆ.

ಮಂಗಳೂರು ಮಹಾನಗರ ಪಾಲಿಕೆಯ ವರದಿಯಂತೆ ಸೌಮ್ಯ ಆರ್ ಎನ್ ಇವರು ಅನಧಿಕೃತವಾಗಿ ಹೊಸ ಆರ್.ಸಿ.ಸಿ ಮನೆ ನಿರ್ಮಾಣ ಮಾಡಿರುವುದು ಕಂಡು ಬರುತ್ತದೆ. ಈ ವಸತಿ ಮನೆಗೆ ಪಾಲಿಕೆಯ ವತಿಯಿಂದ ಕಟ್ಟಡ ನಿರ್ಮಾಣ ಪರವಾನಿಗೆ ಮತ್ತು ಕಟ್ಟಡ ನಂಬ್ರ ನೀಡಿರುವುದಿಲ್ಲ. 89ಎ ಕೋಡಿಯಾಲ್‌ಬೈಲ್ ಗ್ರಾಮದಲ್ಲಿ (1) ಸೌಮ್ಯ ಆರ್ ಎನ್ ಕೊಂ ಶಿವಪ್ಪ ಗೌಡ (2) ಪ್ರೀತಿ ಡಿನ್ನಾ ಪಿರೇರಾ ಕೊಂ ಲ್ಯಾನ್ಸಿ ಪಿರೇರಾ (3) ರೋಸ್ಲಿ ಶಾಂತಿ ಕುಮಾರಿ ಗಂಡ: ರೋಬರ್ಟ್ ದೇವದಾಸ್ (4) ಸೌಮ್ಯ ಆರ್ ಎನ್ (5) ಸೌಮ್ಯ ಆರ್ ಎನ್ ಪದವು ಗ್ರಾಮದಲ್ಲಿ (6) ಮೋಹನ್ ಗೌಡ ಎನ್ ತಂದೆ: ದಾಸಪ್ಪ ಗೌಡ (7) ಪ್ರೀತಿ ಪಿರೇರಾ ಗಂಡ: ಲ್ಯಾನ್ಸಿ ಪಿರೇರಾ (8) ಅನಿತ ಕೊಂ ದಿ.ರಂಗಯ್ಯ ಎನ್.ಕೆ (9) ಸೌಮ್ಯ ಎನ್ ಗೌಡ ತಂದೆ: ಶಿವಪ್ಪ ಗೌಡ (10) ನಮಿತ ಗಂಡ: ಮೋಹನ್ ದಾಸ್ (11) ಲ್ಯಾನ್ವಿ ಪ್ರಜ್ವಲ್ ಪಿರೇರಾ ತಂದೆ: ಲ್ಯಾನ್ಸಿ ಪಿರೇರಾ ರವರುಗಳ ವಾಸದ ಮನೆಗಳು ಸ್ಥಳದಲ್ಲಿ ಇರುವುದು ಕಂಡುಬಂದಿರುವುದಿಲ್ಲ ಎಂಬುದಾಗಿ ವರದಿಯನ್ನು ನೀಡಿರುತ್ತಾರೆ.

ಅನರ್ಹ ಫಲಾನುಭವಿಗಳು 94ಸಿಸಿ ರಡಿಯಲ್ಲಿ ಹಕ್ಕುಪತ್ರವನ್ನು ಪಡೆದುಕೊಳ್ಳಲು ಅಗತ್ಯ ಸುಳ್ಳು ದಾಖಲಾತಿಗಳನ್ನು ಸೃಷ್ಟಿಸಿ ಕಂದಾಯ ನಿರೀಕ್ಷಕರಾದ ಜೊಸೇಪ್ ವಾಲ್ಗಾಟ್ ಪಿರೇರಾ @ ಜಾಯ್ ರವರ ಸುಳ್ಳು ವರದಿಗಳನ್ನು ತಯಾರಿಸಿದ್ದು, ಮಂಗಳೂರು ತಹಶಿಲ್ದಾರ್ ರವರಾದ ಶ್ರೀ ಟಿ.ಜಿ.ಗುರುಪ್ರಸಾದ್ ಇವರು 94ಸಿಸಿ ಯ ಬಗ್ಗೆ ಹೊರಡಿಸಲಾದ ಸರಕಾರದ ಸುತ್ತೋಲೆ/ನಿಯಮಾವಳಿಗಳನ್ನು ಗಾಳಿಗೆತೂರಿ, ಕಡತಗಳನ್ನು ಪರಿಶೀಲನೆ ನಡೆಸದೇ ವಾಸದ ಮನೆ ಇಲ್ಲದಿದ್ದರೂ ಕೂಡಾ ಕೋಟ್ಯಾಂತರ ರೂಪಾಯಿ ಬೆಲೆಬಾಳುವ ನಗರ ಕೇಂದ್ರಭಾಗದಲ್ಲಿರುವ ಸರಕಾರಿ ಜಮೀನುಗಳನ್ನು ಅನರ್ಹ ಫಲಾನುಭವಿಗಳಿಗೆ ಕಾನೂನುಬಾಹಿರವಾಗಿ 94ಸಿಸಿ ರಡಿಯಲ್ಲಿ ಹಕ್ಕುಪತ್ರ ಮಂಜೂರು ಮಾಡಿದ್ದು, ಅಧಿಕಾರ ದುರುಪಯೋಗಪಡಿಸಿಕೊಂಡಿರುವುದು ಸ್ಪಷ್ಟವಾಗಿ ಕಂಡುಬರುತ್ತದೆ.

ಮೇಲ್ಕಾಣಿಸಿದ ಸರ್ಕಾರಿ ಅಧಿಕಾರಿಗಳು ಮತ್ತು ನೌಕರರು ಇತರರೊಂದಿಗೆ ಸೇರಿಕೊಂಡು ಸರ್ಕಾರಿ ಜಾಗವನ್ನು ಅರ್ಹ ಫಲಾನುಭವಿಗಳಿಗೆ ನೀಡದೇ ತಮ್ಮ ಸಂಬಂಧಿಕರಿಗೆ ಮತ್ತು ಹಿತೈಷಿಗಳಿಗೆ ಸುಳ್ಳು ದಾಖಲಾತಿಗಳನ್ನು ಸೃಷ್ಟಿಸಿ, 94ಸಿಸಿ ಯ ಮಾನದಂಡಗಳನ್ನು ಪಾಲಿಸದೇ, ಕಾನೂನು ಬಾಹಿರವಾಗಿ ಹಕ್ಕುಪತ್ರಗಳನ್ನು ನೀಡಿ ಕರ್ತವ್ಯ ನಿರ್ಲಕ್ಷತನ, ಬೇಜಾವಾಬ್ದಾರಿತನ ಮತ್ತು ಅಧಿಕಾರ ದುರುಪಯೋಗಪಡಿಸಿರುವುದು ವಿಚಾರಣೆಯಿಂದ ದೃಢಪಟ್ಟಿರುತ್ತದೆ. ಅಲ್ಲದೇ ಮಂಗಳೂರಿನ ಹಲವಾರು ಕಡೆಗಳಲ್ಲಿ ಇದೇ ರೀತಿಯಲ್ಲಿ ಅಕ್ರಮಗಳನ್ನು ನಡೆಸಿರುವ ಸಾದ್ಯತೆ ಇರುವುದರಿಂದ ಮತ್ತು 94ಸಿಸಿ ಕಡತಗಳು, ರಿಜಿಸ್ಟರ್‌ಗಳನ್ನು ತಿದ್ದುವ, ದಾಖಲಾತಿಗಳನ್ನು ಬದಲಾಯಿಸುವ, ಸೇರ್ಪಡೆಗೊಳಿಸುವ, ಸಾಕ್ಷ್ಯ ನಾಶಪಡಿಸುವ ಮತ್ತು ಹಕ್ಕುಪತ್ರ ಮಂಜೂರಾದ ನಿವೇಶನಗಳಲ್ಲಿ ಮನೆಗಳನ್ನು ನಿರ್ಮಿಸುವ ಸಾದ್ಯತೆ ಇರುವುದರಿಂದ ಸಂಬಂದಿಸಿದ ಅಧಿಕಾರಿಗಳಾದ 1) ಶ್ರೀ ಟಿ.ಜಿ.ಗುರುಪ್ರಸಾದ್, ತಹಶಿಲ್ದಾರ್, ಮಂಗಳೂರು ತಾಲೂಕು 2) ಜೊಸೇಪ್ ವಾಲ್ಗಾಟ್ ಪಿರೇರಾ @ ಜಾಯ್, ಕಂದಾಯ ನಿರೀಕ್ಷಕರು, ಮಂಗಳೂರು ಎ ಹೋಬಳಿ, 3) ಶ್ರೀ ರಮೇಶ್, ಗ್ರಾಮ ಸಹಾಯಕ, ಪ್ರಸ್ತುತ ಕಂದಾಯ ನಿರೀಕ್ಷಕರ ಕಚೇರಿ, ಮಂಗಳೂರು ಎ ಹೋಬಳಿ ಮತ್ತು ಅನರ್ಹ ಫಲಾನುಭವಿಗಳ ಮೇಲೆ ಕೂಡಲೇ ಸೂಕ್ತ ಕ್ರಮಕೈಗೊಳ್ಳಬೇಕು ಎಂಬುದಾಗಿ ಉಲ್ಲೇಖ(3) ರಂತೆ

ಪೊಲೀಸ್ ನಿರೀಕ್ಷಕರು ವರದಿ ಸಲ್ಲಿಸಿರುತ್ತಾರೆ. ಸದರಿ ಅಧಿಕಾರಿಗಳು ಮತ್ತು ಅನರ್ಹ ಫಲಾನುಭವಿಗಳ ವಿರುದ್ಧ ಸೂಕ್ತ ಕ್ರಮ ಕೈಗೊಳ್ಳುವ ಅಗತ್ಯತೆ ಇರುತ್ತದೆ ಎಂಬುದಾಗಿ ಅಭಿಪ್ರಾಯಪಡಲಾಗಿರುತ್ತದೆ.

ಪೊಲೀಸ್ ನಿರೀಕ್ಷಕರು ಕರ್ನಾಟಕ ಲೋಕಾಯುಕ್ತ ಮಂಗಳೂರು ರವರ ವಿಚಾರಣಾ ವರದಿ, ದೂರು ಅರ್ಜಿ ನಕಲು, ವಿಚಾರಣೆಯ ಸಮಯ ಸಂಗ್ರಹಿಸಿದ ದಾಖಲಾತಿಗಳನ್ನು ಈ ವರದಿಯೊಂದಿಗೆ ಲಗತ್ತಿಸಿ ತಮ್ಮ ಪರಿಶೀಲನೆಗಾಗಿ ಸಲ್ಲಿಸಲಾಗಿದೆ.

ತಮ್ಮ ವಿಶ್ವಾಸಿ,

ಸಹಿ/-,
ಪೋಲಿಸ್ ಅಧೀಕ್ಷಕರು,
ಕರ್ನಾಟಕ ಲೋಕಾಯುಕ್ತ,
ಮಂಗಳೂರು ವಿಭಾಗ, ಮಂಗಳೂರು".

3. The report submitted by the Superintendent of Police, Karnataka Lokayukta, Mangaluru, was considered by the Superintendent of Police-5, Karnataka Lokayukta, Bengaluru and placed before the Additional Director General of Police, Karnataka Lokayukta, Benaluru. Both of them have accepted the report and have made recommendation either to initiate suo-moto proceedings or refer the matter to Anti Corruption Bureau for the purpose of criminal prosecution. For the present I am of the view, that it is desirable to initiate suo-moto proceedings for the reasons set out by me.

4. The report submitted by the Superintendent of Police, Karnataka Lokayukta, Mangaluru, prima-facie indicates

(19) that the revenue officials in collusion with several beneficiaries were responsible for grant of valuable property situated within the limits of Mangaluru City Corporation and outside to the persons who are totally ineligible and also relations of the revenue officials. The report submitted by the Superintendent of Police, Karnataka Lokayukta, Mangaluru, prima facie shows that the grants are illegal and unauthorized. Therefore, on the basis of a regular enquiry/investigation done, if the report submitted by the Superintendent of Police, Karnataka Lokayukta, Mangaluru, is true, the grants made requires to be cancelled and persons concerned are required to be prosecuted for various offences committed by them.

5. In the light of what is stated above, I am prima-facie satisfied that the report submitted by the Superintendent of Police, Karnataka Lokayukta, Mangaluru, is sufficient for me to treat it as a source material and initiate suo-moto proceedings in exercise of the power conferred on me under Sections 7(1)(b) and 9(3)(a) of the Karnataka Lokayukta Act, 1984. Accordingly, it is ordered. The officers

mentioned herein below may be impleaded as Respondents No. 1 to 5 and notice may be issued to them.

1 The Deputy Commissioner,
Mangaluru,
Dakshina Kannada District;

2 The Commissioner,
Mangaluru City Corporation,
Mangaluru.

3 Sri. T.G.Guruprasad, Tahsildar, Mangaluru Taluk, Mangaluru District;

4 Sri. Joseph Walgat Pirera @ Joy, Revenue Inspector, Mangaluru 'A' Hobli;

5 Sri. Ramesh, Village Assistant, working in the office of the Revenue Inspector, Mangaluru 'A' Hobli.

The Respondents No.1 and 2 i.e., the Deputy Commissioner, Dakshina Kannada District and the Commissioner, Mangaluru City Corporation, Mangaluru are made as parties for the purpose of enquiry and to carry out the directions that may be given by me to them from time to time. The Respondents No. 3 to 5 are impleaded as parties to the proceedings with a view to conduct enquiry against them, in the light of the report submitted by the

Superintendent of Police, Karnataka Lokayukta, Mangaluru.

6. In the light of the materials available on record, I am of the view, that it would be in the interest of justice to refer the matter for the purpose of proper investigation as to whether the beneficiaries are eligible for allotment of house/site under Section 94-CC of the Karnataka Land Revenue Act, 1964 (herein after referred to as **'the KLR Act'** for short) and whether any one of them had satisfied the requirements of Section 94-CC of the KLR Act, 1964 and on such an enquiry, if it is found that they are not eligible, the grants made to them are required to be cancelled. For the said purpose, I am of the view, that it would be in the interest of justice to refer the matter in exercise of power conferred on me under Section 15(3) of the Karnataka Lokayukta Act, 1984, to the Deputy Commissioner, Mangaluru, Dakshina Kannada District. The 1st Respondent - the Deputy Commissioner, Mangaluru shall consider the report submitted by Superintendent of Police, Karnataka Lokayukta,

Mangaluru, as extracted above, the copy of which is enclosed herewith and get a proper investigation/enquiry conducted by a responsible officer not below the rank of Assistant Commissioner and submit a report, if need be, by making appropriate orders for cancellation of the grants made. He is also given liberty if need be to initiate criminal proceedings against the concerned, if he so considers that the facts and circumstances of the case and the gravity of the false claims made by the Applicants to call for such an action.

7. The report submitted by the Superintendent of Police, Karnataka Lokayukta, Mangaluru, related to the lands in Sy.No.1554/2B of 89A Kodialbail village and Sy.No.196/1B1 of Padavu village, referred to in the report. However, since the report indicates that the collusive grants have been made to the persons who have not built the houses, etc., I am of the view, that it would be in the interest of justice to direct the Deputy Commissioner, Mangaluru, Dakshina Kannda District to investigate all the grants made under Section 94-CC of the KLR Act from the

(23)

year 2015 i.e., from the date of coming into force of Section 94-CC of the KLR Act, as modified from time to time, to verify as to whether any illegal grants have been made in collusion with the revenue officials.

8. The object of Sections 94-C and 94-CC of the KLR Act is to give dwelling site to the persons who are in occupation of dwelling house in a government land and poor persons. It is not intended to confer power on the revenue officers to connive with their relations and distribute public property without any justification. It is needless to point out that the government land is required to be preserved for the purpose of posterity and future generation and it cannot be lightly distributed to the close relations/associates of the revenue officials on extraneous considerations.

9. Section 94-CC of the KLR Act only confer power on prescribed authority after holding such an enquiry as he deems fit that if any person is in unauthorized occupation of any land belonging to the Government and has constructed a dwelling house on such land prior to the amendment i.e., 1st day of January 2015, may on an

application made to it, such person could be granted such land.

10. It is needless to point out that the prescribed authority is required to satisfy with the requirement set out under Section 94-CC of the KLR Act, that the applicant has satisfied the requirement of Section 94-CC of the KLR Act and the applicant is entitled for grant of such land along with the building constructed by him subject to the conditions laid down in that Section.

11. This order along with the report submitted by the Superintendent of Police, Karnataka Lokayukta, Mangaluru, may be placed before the ARE-6 and the ARE-6 is directed to forward the copy of this order along with the report of the Superintendent of Police, Karnataka Lokayukta, Mangaluru and other relevant papers to the Respondent No.1 Deputy Commissioner, Mangaluru and to all other Respondents. One set of copies of the investigation papers submitted by the Superintendent of Police, Karnataka Lokayukta, Mangaluru, with the other connected papers may be retained by the office.

1185 24/2019

(25)

12. The Deputy Commissioner, Mangaluru, Dakshina Kannada District is given three months time to conduct an enquiry himself/get an enquiry conducted and submit the report, to this office.

13. Respondents No. 1 and 2 are directed to ensure status-quo regarding the sites in question as on the date of receipt of this order and prevent putting up any construction on the sites in question. The Respondents No. 3 to 5 are also directed to submit their comments with regard to the report by the next date of hearing

List this case on **29-07-2019 at 03-00 p.m.**

**(Justice P. Vishwanatha Shetty),** 25/4/2019
Lokayukta,
Karnataka State.

**AS***

14) Complaints Section (ARLO-4)

15) ARE-6)

No.Lok/Mys/1184/2018/ARE-6 Date:29-07-2019

**NOTE**

We have received the report dtd: 26-7-2019 from the Dy. Commissioner, Dakshina Kannada District, along with the copy of the report dtd:15-7-2019, submitted by the AC., Mangalore Sub-Division, through Email. The report reads herein as under;

(1)

ಕರ್ನಾಟಕ ಸರ್ಕಾರ ಕಂದಾಯ ಇಲಾಖೆ

**ಸಹಾಯಕ ಆಯುಕ್ತರ ಕಾರ್ಯಾಲಯ, ಮಂಗಳೂರು ಉಪವಿಭಾಗ**

2 ನೇ ಮಹಡಿ, ಮಿನಿ ವಿಧಾನ ಸೌಧ ಕಟ್ಟಡ, ಮಂಗಳೂರು

ದೂರವಾಣಿ/ಫ್ಯಾಕ್ಸ್:ಕಛೇರಿ: 0824-2220569, ಇ-ಮೇಲ್: ac.mlore@gmail.com

ಇಎಸ್.ಟಿ(1)ಸಿ.ಆರ್:43/19-20 ದಿನಾಂಕ:15/07/2019.

ಇವರಿಗೆ,

ಜಿಲ್ಲಾಧಿಕಾರಿಯವರ ಕಛೇರಿ
ದ.ಕ ಕನ್ನಡ, ಮಂಗಳೂರು
16 JUL 2019
OFFICE OF THE
DEPUTY COMMISSIONER
D.K. MANGALURU

ಮಾನ್ಯ ಜಿಲ್ಲಾಧಿಕಾರಿಯವರು,
ದ.ಕ.ಜಿಲ್ಲೆ,ಮಂಗಳೂರು.

ಮಾನ್ಯರೇ,

ವಿಷಯ: ಮಂಗಳೂರು ತಾಲೂಕಿನ ಕೊಡಿಯಾಲ್ ಬೈಲ್, ಪದವು, ಜಪ್ಪಿನಮೊಗರು ವಸತಿ ಸ್ಥಳದಲ್ಲಿ ಮಂಗಳೂರು ತಾಲೂಕಿನ ಕಂದಾಯ ಅಧಿಕಾರಿಗಳು ಸರ್ಕಾರಿ ಜಮೀನನ್ನು ಕಾನೂನು ಬಾಹಿರವಾಗಿ 94ಸಿಸಿ ರಡಿಯಲ್ಲಿ ಅನರ್ಹ ಫಲಾನುಭವಿಗಳಿಗೆ ಮಂಜೂರು ಮಾಡಿ ಹಕ್ಕು ಪತ್ರ ವಿತರಿಸಿರುವ ಕುರಿತು ಸಲ್ಲಿಸಲಾದ ದೂರು ಅರ್ಜಿಯ ಬಗ್ಗೆ.

ಉಲ್ಲೇಖ:
1) ಅಪರ ನಿಬಂಧಕರು ವಿಚಾರಣೆಗಳು-6 ಕರ್ನಾಟಕ ಲೋಕಾಯುಕ್ತ ಬೆಂಗಳೂರು ಇವರ ಪತ್ರ ಸಂಖ್ಯೆ:ಕಂಪ್ಲೆಂಟ್/ಲೋಕ್/ ಎಂವೈಎಸ್ / 1184/ 2019/ಎ ಆರ್ ಇ-6 ದಿ:03/05/19.
2) ತಮ್ಮ ಕಛೇರಿ ಪತ್ರ ಸಂ: ಇಎಸ್ ಟಿ (1)ಸಿಆರ್ 42/2019/ ದಿನಾಂಕ 29.6.2019.
3) ತಮ್ಮ ಕಚೇರಿ ಪತ್ರ ಸಂಖ್ಯೆ:ಎಲ್.ಎನ್.ಡಿ(2ಬಿ)ಸಿ.ಆರ್/1/2019/ಬಿ7 ದಿ:17-05-2019 ಮತ್ತು ದಿ:09-07-19.

*************

ಮಂಗಳೂರು ತಾಲೂಕಿನ ಕೊಡಿಯಾಲ್ ಬೈಲ್ ಬಿ, ಪದವು ಮತ್ತು ಜಪ್ಪಿನಮೊಗರು ಗ್ರಾಮಗಳ ವಸತಿ ಸ್ಥಳದಲ್ಲಿ ಸರಕಾರಿ ಜಮೀನನ್ನು ಕಾನೂನು ಬಾಹಿರವಾಗಿ 94 ಸಿಸಿ ರಡಿಯಲ್ಲಿ ಅನರ್ಹ ಫಲಾನುಭವಿಗಳಿಗೆ ಮಂಜೂರು ಮಾಡಿ ಹಕ್ಕು ಪತ್ರ ವಿತರಿಸುವ ಕುರಿತು ಮಂಗಳೂರು ತಾಲೂಕು ಕಂದಾಯ ಅಧಿಕಾರಿಗಳಾದ 1) ಟಿ.ಜಿ ಗುರುಪ್ರಸಾದ್, ತಹಶೀಲ್ದಾರರು ಮಂಗಳೂರು ತಾಲೂಕು, 2) ಜೋಸೆಫ್ ವಾಲ್ಟಾಟ್ ಪಿರೇರಾ, ಕಂದಾಯ ನಿರೀಕ್ಷಕರು, ಮಂಗಳೂರು ಎ ಹೋಬಳಿ, 3) ರಮೇಶ್, ಗ್ರಾಮ ಸಹಾಯಕ (ಪ್ರಸ್ತುತ ಕಂದಾಯ ನಿರೀಕ್ಷಕರ ಕಚೇರಿ ಮಂಗಳೂರು ಎ ಹೋಬಳಿ) ಇವರ ಮೇಲೆ ಸಲ್ಲಿಸಲಾದ ದೂರು ಅರ್ಜಿಯ ವಿಚಾರದಲ್ಲಿ ಮಾನ್ಯ ಲೋಕಾಯುಕ್ತರು

ತಮ್ಮ ಆದೇಶದ ದಿನಾಂಕ 30.4.2019 ರ ಕಂಡಿಕೆ 7 ರಿಂದ 13 ರಲ್ಲಿ ನಿರ್ದೇಶನ ನೀಡಿರುವಂತೆ ಕಾನೂನು ರೀತ್ಯಾ ಕ್ರಮ ಕೈಗೊಂಡು ದಾಖಲೆಗಳೊಂದಿಗಿನ ವಿವರವಾದ ವರದಿಯನ್ನು ಉಲ್ಲೇಖ(1)ರ ಪತ್ರದಲ್ಲಿ ಕೋರಿರುವ ಮೇರೆಗೆ ಉಲ್ಲೇಖ (2) ಮತ್ತು ಉಲ್ಲೇಖ(3)ರಲ್ಲಿ ಮಾನ್ಯ ಜಿಲ್ಲಾಧಿಕಾರಿಗಳು ಸದ್ರಿ ಅಧಿಕಾರಿ / ನೌಕರರ ವಿರುದ್ಧ ಅಭಿಯೋಜನೆ ಮಂಜೂರಾತಿ ನೀಡುವ ಕುರಿತು ಸದರಿ ಪ್ರಕರಣಗಳನ್ನು ಸ್ಥಳ ತನಿಖೆ ನಡೆಸಿ ಕೂಲಂಕುಷವಾಗಿ ತನಿಖೆ ಮಾಡಿ ಲೋಕಾಯುಕ್ತ ವರದಿ ಬಗ್ಗೆ ಗೌಪ್ಯವಾಗಿ ವರದಿ ಸಲ್ಲಿಸುವ ಕುರಿತು ನಿರ್ದೇಶನ ನೀಡಿದ ಮೇರೆಗೆ ಈ ಕೆಳಗಿನಂತೆ ವರದಿಯನ್ನು ತಯಾರಿಸಿ ಸಲ್ಲಿಸಲಾಗಿದೆ.

| ಕ್ರ.ಸಂ | ಅರ್ಜಿ ಸ್ವೀಕೃತಿ ಸಂಖ್ಯೆ:- | ಹೆಸರು ಮತ್ತು ವಿಳಾಸ | ಷರಾ |
|---|---|---|---|
| 1. | 2401010100001 | ಶ್ರೀಮತಿ ಸೌಮ್ಯ ಆರ್.ಎಸ್ ,<br>ಬಿನ್ ಶಿವಪ್ಪ ಗೌಡ,<br>ಮನೆ ನಂಬ್ರ:2-21-1625/1ಎ,<br>ಮಾರ್ಟಿನ್ ಪ್ಯಾಸ್ ರೋಡ್,ಹ್ಯಾಟ್ ಹಿಲ್,ಮಂಗಳೂರು. | ರಮೇಶ್ ಗ್ರಾಮಸಹಾಯಕ, (ಪ್ರಸ್ತುತ ಕಂದಾಯ ನಿರೀಕ್ಷಕರ ಕಚೇರಿ ಮಂಗಳೂರು ಎ ಹೋಬಳಿ) ಇವರ ಪತ್ನಿ. |

ಮೇಲ್ಕಾಣಿಸಿದ ಅರ್ಜಿಯ ಬಗ್ಗೆ ಪರಿಶೀಲನೆ ನಡೆಸಲಾಗಿ ಅರ್ಜಿಯಲ್ಲಿ ಅರ್ಜಿದಾರರ ಸಹಿ ಇರುವುದಿಲ್ಲ. ಅರ್ಜಿದಾರರು ಅರ್ಜಿಯ ಜೊತೆ ಹಾಜರು ಪಡಿಸಿದ ಆಧಾರ ಸಂಖ್ಯೆ:9450 2287 0260 ರಲ್ಲಿ ವಿಳಾಸ,ಮನೆ ನಂಬ್ರ 3-275 ಪಾವು ಮೇರ ಹೌಸ್, ಚಿಕ್ಕ ಮುಡ್ನೂರು ಗ್ರಾಮದ ಪುತ್ತೂರು ತಾಲೂಕಿನ ವಿಳಾಸದಲ್ಲಿದೆ. ಆಧಾರ್ ಪಡೆದ ದಿ:22-04-2013 ಹಾಗೂ ರ ಮತದಾರರ ಗುರುತಿನ ಚೀಟಿಯಲ್ಲಿ ವಿಳಾಸ-ಮನೆ ನಂಬ್ರ 12-6-13 ಕುಲಶೇಖರ ಪದವು ಗ್ರಾಮ ಎಂಬುದಾಗಿ ದಾಖಲು ಇರುತ್ತದೆ. ಅದನ್ನು ಪಡೆದ ದಿ:27-09-2013 ಆಗಿರುತ್ತದೆ.ಸದರಿ ಅರ್ಜಿಯಲ್ಲಿ ಕಂದಾಯ ನಿರೀಕ್ಷಕರು ಹಾಗೂ ಗ್ರಾಮಕರಣಿಕರ ತನಿಖಾ ವರದಿ ಇರುವುದಿಲ್ಲ ಮತ್ತು ಹಕ್ಕು ಪತ್ರ ನೀಡಿದ ಬಗ್ಗೆ ಯಾವುದೇ ದಾಖಲಾತಿ ಲಭ್ಯವಿರುವುದಿಲ್ಲ.

ಅಭಿಪ್ರಾಯ:- ಸದರಿ ಅರ್ಜಿಯು ಕಾನೂನು ಬಾಹಿರವಾಗಿ ಸಲ್ಲಿಸಿ ಅಕ್ರಮವಾಗಿ ಮಂಜೂರು ಮಾಡಲಾಗಿದೆ.

| ಕ್ರ.ಸಂ | ಅರ್ಜಿ ಸ್ವೀಕೃತಿ ಸಂಖ್ಯೆ:- | ಹೆಸರು ಮತ್ತು ವಿಳಾಸ | ಷರಾ |
|---|---|---|---|
| 2. | 240101517900003 | ಶ್ರೀಮತಿ ಸೌಮ್ಯ ಆರ್.ಎಸ್,<br>ಬಿನ್ ಚಂದ್ರಾವತಿ,<br>ಮನೆ ನಂಬ್ರ:1-2-137/2ಎ,<br>ಹ್ಯಾಟ್ ಹಿಲ್,<br>ಲಾಲ್ ಭಾಗ್,ಮಂಗಳೂರು. | ರಮೇಶ್ ಗ್ರಾಮಸಹಾಯಕ, (ಪ್ರಸ್ತುತ ಕಂದಾಯ ನಿರೀಕ್ಷಕರ ಕಚೇರಿ ಮಂಗಳೂರು ಎ ಹೋಬಳಿ) ಇವರ ಪತ್ನಿ. |

ಮೇಲ್ಕಾಣಿಸಿದ ಅರ್ಜಿಯ ಬಗ್ಗೆ ಪರಿಶೀಲನೆ ನಡೆಸಲಾಗಿ ಅರ್ಜಿಯಲ್ಲಿ ಅರ್ಜಿದಾರರ ಸಹಿ ಇರುತ್ತದೆ.ಅರ್ಜಿದಾರರು ಅರ್ಜಿಯ ಜೊತೆ ಹಾಜರು ಪಡಿಸಿದ ಆಧಾರ ಸಂಖ್ಯೆ:9450 2287 0260 ರಲ್ಲಿ ವಿಳಾಸ,ಮನೆ ನಂಬ್ರ 3-275 ಪಾಪು ಮೇರ ಹೌಸ್, ಚಿಕ್ಕ ಮಡ್ನೂರು ಗ್ರಾಮದ ಪುತ್ತೂರು ತಾಲೂಕಿನ ವಿಳಾಸದಲ್ಲಿದೆ. ಆಧಾರ್ ಪಡೆದ ದಿ:22-04-2013 ಹಾಗೂ ರ ಮತದಾರರ ಗುರುತಿನ ಚೀಟಿಯಲ್ಲಿ ವಿಳಾಸ-ಮನೆ ನಂಬ್ರ 12-6-13 ಕುಲಶೇಖರ ಪದವು ಗ್ರಾಮ ಎಂಬುದಾಗಿ ದಾಖಲು ಇರುತ್ತದೆ. ಅದನ್ನು ಪಡೆದ ದಿ:27-09-2013 ಆಗಿರುತ್ತದೆ. ಮನೆ ನಂಬ್ರ:2-21-1625/1(1) ರ ಮನೆ ತೆರಿಗೆ 2018-19 ನೇ ಸಾಲಿನಲ್ಲಿ ಕಟ್ಟಿದ ಬಗ್ಗೆ ಟ್ಯಾಕ್ಸ್ ರಶೀದಿ ಹಾಜರು ಪಡಿಸಿರುತ್ತಾರೆ.ಸದರಿ ಅರ್ಜಿಯಲ್ಲಿ ಕಂದಾಯ ನಿರೀಕ್ಷಕರು ಹಾಗೂ ಗ್ರಾಮಕರಣಿಕರ ತನಿಖಾ ವರದಿ ಇರುವುದಿಲ್ಲ ಮತ್ತು ಹಕ್ಕು ಪತ್ರ ನೀಡಿದ ಬಗ್ಗೆ ಯಾವುದೇ ದಾಖಲಾತಿ ಲಭ್ಯವಿರುವುದಿಲ್ಲ.

<u>ಅಭಿಪ್ರಾಯ:</u>- ಸದರಿ ಅರ್ಜಿದಾರರ ಹೆಸರಿನಲ್ಲಿ ಎರಡನೇ ಅರ್ಜಿ ಪಡೆಯಲಾಗಿದ್ದು, ಸದರಿ ಅರ್ಜಿಯು ಕಾನೂನು ಬಾಹಿರವಾಗಿ ಸಲ್ಲಿಸಿ ಅಕ್ರಮವಾಗಿ ಮಂಜೂರು ಮಾಡಲಾಗಿದೆ.

| ಕ್ರ.ಸಂ | ಅರ್ಜಿ ಸ್ವೀಕೃತಿ ಸಂಖ್ಯೆ:- | ಹೆಸರು ಮತ್ತು ವಿಳಾಸ | ಷರಾ |
|---|---|---|---|
| 3. | 240101510700357 | ಸೌಮ್ಯ ಎಸ್ ಗೌಡ,<br>ಬಿನ್ ಶಿವಪ್ಪ ಗೌಡ,<br>ಮನೆ ನಂಬ್ರ:12-5-13,ಕೋಟಿಮುರ,<br>ಕುಲಶೇಖರ ಪದವು ಗ್ರಾಮ. | ರಮೇಶ್ ಗ್ರಾಮಸಹಾಯಕ, (ಪ್ರಸ್ತುತ ಕಂದಾಯ ನಿರೀಕ್ಷಕರ ಕಚೇರಿ ಮಂಗಳೂರು ಎ ಹೋಬಳಿ) ಇವರ ಪತ್ನಿ. |

ಮೇಲ್ಕಾಣಿಸಿದ ಅರ್ಜಿಯ ಬಗ್ಗೆ ಪರಿಶೀಲನೆ ನಡೆಸಲಾಗಿ ಅರ್ಜಿಯಲ್ಲಿ ಅರ್ಜಿದಾರರ ಸಹಿ ಇರುವುದಿಲ್ಲ.ಅರ್ಜಿದಾರರು ಅರ್ಜಿಯ ಜೊತೆ ಹಾಜರು ಪಡಿಸಿದ ಆಧಾರ ಸಂಖ್ಯೆ:9450 2287 0260 ರಲ್ಲಿ ವಿಳಾಸ,ಮನೆ ನಂಬ್ರ 3-275 ಪಾಪು ಮೇರ ಹೌಸ್, ಚಿಕ್ಕ ಮುಡ್ನೂರು ಗ್ರಾಮದ ಪುತ್ತೂರು ತಾಲೂಕಿನ ವಿಳಾಸದಲ್ಲಿದೆ. ಆಧಾರ್ ಪಡೆದ ದಿ:22-04-2013 ಹಾಗೂ ರ ಮತದಾರರ ಗುರುತಿನ ಚೀಟಿಯಲ್ಲಿ ವಿಳಾಸ-ಮನೆ ನಂಬ್ರ 12-6-13 ಕುಲಶೇಖರ ಪದವು ಗ್ರಾಮ ಎಂಬುದಾಗಿ ದಾಖಲು ಇರುತ್ತದೆ. ಅದನ್ನು ಪಡೆದ ದಿ:27-09-2013 ಆಗಿರುತ್ತದೆ.ಸದರಿ ಅರ್ಜಿಯಲ್ಲಿ ಗ್ರಾಮಕರಣಿಕರ ತನಿಖಾ ವರದಿ ಇರುವುದಿಲ್ಲ. ಕಂದಾಯ ನಿರೀಕ್ಷಕರು ಮಂಗಳೂರು ಎ ಹೋಬಳಿ ಇವರ ವರದಿ ಲಭ್ಯವಿರುತ್ತದೆ.ಸದ್ರಿ ವರದಿಯ ಆಧಾರದ ಮೇಲೆ ತಹಶೀಲ್ದಾರರು ಮಂಗಳೂರು ಇವರು ನೀಡಿದ ಹಕ್ಕು ಪತ್ರ ಲಭ್ಯವಿರುತ್ತದೆ.

ಅಭಿಪ್ರಾಯ:- ಸದರಿ ಅರ್ಜಿದಾರರ ಹೆಸರಿನಲ್ಲಿ ಮೂರನೇ ಅರ್ಜಿ ಪಡೆಯಲಾಗಿದ್ದು, ಸದರಿ ಅರ್ಜಿಯು ಕಾನೂನು ಬಾಹಿರವಾಗಿ ಸಲ್ಲಿಸಿ ಅಕ್ರಮವಾಗಿ ಮಂಜೂರು ಮಾಡಲಾಗಿದೆ.

ಕ್ರ.ಸಂ: 2 ಮತ್ತು 3 ರ ಅರ್ಜಿಗಳ ಜೊತೆ ಸಲ್ಲಿಸಿರುವ 2 ಪ್ರತ್ಯೇಕ ಅರ್ಜಿಗಳ ಜೊತೆ ಲಗತ್ತಿಸಿರುವ ಮನೆಗಳ ಭಾವಚಿತ್ರಗಳು ಹಾಗೂ ಅರ್ಜಿದಾರರ ಭಾವಚಿತ್ರಗಳು ಒಂದೇ ರೀತಿಯ ಭಾವಚಿತ್ರಗಳಾಗಿರುತ್ತದೆ.

ಒಬ್ಬರೇ ವ್ಯಕ್ತಿ ಬೇರೆ ಬೇರೆ ಗ್ರಾಮಗಳಲ್ಲಿ ಒಟ್ಟು 3 ಅರ್ಜಿಗಳನ್ನು 94 ಸಿಸಿ ರಡಿಯಲ್ಲಿ ಸರಕಾರಿ ಜಮೀನನ್ನು ಮಂಜೂರಾತಿ ಕೋರಿ ಅರ್ಜಿ ಸಲ್ಲಿಸಿರುವುದು ಸ್ಪಷ್ಟವಾಗಿ ಕಂಡು ಬರುತ್ತದೆ.ಮೇಲಿನ ಅರ್ಜಿಗಳಲ್ಲಿ ವ್ಯಾಸ್ತವ್ಯದ ಬಗ್ಗೆ ಸಲ್ಲಿಸಿರುವ ದಾಖಲಾತಿಗಳು 2012 ರ ನಂತರ ಮಾಡಿಸಿರುವ ದಾಖಲಾತಿಗಳಾಗಿರುತ್ತದೆ. 2012 ರ ಹಿಂದಿನಿಂದ ವಾಸ್ತವ್ಯ ಮಾಡುತ್ತಿರುವ ಬಗ್ಗೆ ಯಾವುದೇ ದಾಖಲೆಗಳು ಕಂಡು ಬರುವುದಿಲ್ಲ.

| ಕ್ರ.ಸಂ | ಅರ್ಜಿ ಸ್ವೀಕೃತಿ ಸಂಖ್ಯೆ:- | ಹೆಸರು ಮತ್ತು ವಿಳಾಸ | ಷರಾ |
|---|---|---|---|
| 1. | 240101510700353 | ಪ್ರೀತಿ ಪಿರೇರಾ, ಕೋಂ ಲ್ಯಾನ್ಸಿ ಪಿರೇರಾ , ಮನೆ ನಂಬ್ರ:5-11-1 ಕೋಟಿ ಮುರ ರಸ್ತೆ ,ಕುಲಶೇಖರ ಪದವು ಗ್ರಾಮ. | ಜೋಸೆಫ್ ವಾಲ್ಡಾಟ್ ಪಿರೇರಾ ಕಂದಾಯ ನಿರೀಕ್ಷಕರು ,ಮಂಗಳೂರು ಎ ಹೋಬಳಿ ಇವರ ಸಹೋದರಿ. |

ಇವರು ಕಡತದ ಜೊತೆ ಹಾಜರು ಪಡಿಸಿದ ಪಡಿತರ ಚೀಟಿ ಸಂಖ್ಯೆ MNG05112417 ರಮಾ ಶಕ್ತಿ ಹತ್ತಿರ ,ಶಕ್ತಿ ನಗರ 21 ಪದವು ಮಂಗಳೂರು ವಿಳಾಸದಲ್ಲಿರುತ್ತದೆ. ಅರ್ಜಿದಾರರ ಅರ್ಜಿ ಜೊತೆ ಹಾಜರು ಪಡಿಸಿದ ನೀರಿನ ಬಿಲ್ಲು ಈಶ್ವರ ಪೂಜಾರಿ ಎಂಬುವವರ ಹೆಸರಿನಲ್ಲಿದೆ, ವಿದ್ಯುತ್ ಬಿಲ್ಲಿನಲ್ಲಿ ಯಾವುದೇ ರೀತಿಯ ದಾಖಲೆಗಳು ಕಂಡು ಬರುತ್ತಿಲ್ಲ. ಅರ್ಜಿದಾರರು ಹಾಜರು ಪಡಿಸಿದ ಪಡಿತರ ಚೀಟಿಯಲ್ಲಿ ಗಂಡನ ಹೆಸರನ್ನು ಫೆಲಿಕ್ಸ್ ಕುಟಿನಾ ಎಂಬುದಾಗಿ ದಾಖಲಿಸಲಾಗಿದೆ. ಅರ್ಜಿದಾರರು ಮನೆ ಕಟ್ಟಡ ತೆರಿಗೆ ಪಾವತಿ ಮಾಡಿದ ಬಗ್ಗೆ ಯಾವುದೇ ದಾಖಲಾತಿಗಳನ್ನು ಹಾಜರುಪಡಿಸಿರುವುದಿಲ್ಲ. ಈ ಎಲ್ಲಾ ಮಾಹಿತಿಗಳನ್ನು ಗಮನಿಸಿದಾಗ ಒಂದಕ್ಕೊಂದು ತಾಳೆ ಬರುತ್ತಿಲ್ಲ. ಇದು ಸುಳ್ಳು ಮಾಹಿತಿ ನೀಡಿರುವುದಾಗಿ ತಿಳಿದು ಬರುತ್ತದೆ. ಸದರಿ ಅರ್ಜಿಯಲ್ಲಿ ಗ್ರಾಮಕರಣಿಕರ ತನಿಖಾ ವರದಿ ಇರುವುದಿಲ್ಲ, ಕಂದಾಯ ನಿರೀಕ್ಷಕರು ಮಂಗಳೂರು ಎ ಹೋಬಳಿ ಇವರ ವರದಿ ಲಭ್ಯವಿರುತ್ತದೆ.ಸದ್ರಿ ವರದಿಯ ಆಧಾರದ ಮೇಲೆ ತಹಶೀಲ್ದಾರರು ಮಂಗಳೂರು ಇವರು ನೀಡಿದ ಹಕ್ಕು ಪತ್ರ ಲಭ್ಯವಿರುತ್ತದೆ. ಮೇಲಿನ ಅರ್ಜಿಗಳಲ್ಲಿ ವ್ಯಾಸ್ತವ್ಯದ ಬಗ್ಗೆ ಸಲ್ಲಿಸಿರುವ ದಾಖಲಾತಿಗಳು 2012 ರ ನಂತರ ಮಾಡಿಸಿರುವ ದಾಖಲಾತಿಗಳಾಗಿರುತ್ತದೆ. 2012 ರ ಹಿಂದಿನಿಂದ ವಾಸ್ತವ್ಯ ಮಾಡುತ್ತಿರುವ ಬಗ್ಗೆ ಯಾವುದೇ ಧಾಖಲೆಗಳು ಕಂಡು ಬರುವುದಿಲ್ಲ.

<u>ಅಭಿಪ್ರಾಯ</u>:- ಸದರಿ ಅರ್ಜಿಯು ಕಾನೂನು ಬಾಹಿರವಾಗಿ ಸಲ್ಲಿಸಿ ಅಕ್ರಮವಾಗಿ ಮಂಜೂರು ಮಾಡಲಾಗಿದೆ.

| ಕ್ರ.ಸಂ | ಅರ್ಜಿ ಸ್ವೀಕೃತಿ ಸಂಖ್ಯೆ:- | ಹೆಸರು ಮತ್ತು ವಿಳಾಸ | ಷರಾ |
|---|---|---|---|
| 1. | 2401015128000039 | ಲ್ಯಾನ್ಸಿ ಪ್ರಜ್ವಲ್ ಪಿರೇರಾ ,<br>ಬಿನ್ ಲ್ಯಾನ್ಸಿ ಪಿರೇರಾ,<br>ಮನೆ ನಂಬ್ರ:26-2-90-3,<br>ಆದಂ ಕುದ್ರು,ಜಪ್ಪಿನಮೊಗರು<br>ಮಂಗಳೂರು. | ಜೋಸೆಫ್ ವಾಲ್ಟಾಟ್ ಪಿರೇರಾ ಕಂದಾಯ ನಿರೀಕ್ಷಕರು ,ಮಂಗಳೂರು ಎ ಹೋಬಳಿ ಇವರ ಸಹೋದರಿಯಾದ ಪ್ರೀತಿ ಪಿರೇರಾ ರವರ ಮಗ. |

ಅರ್ಜಿದಾರರಾದ ಲ್ಯಾನ್ಸಿ ಪ್ರಜ್ವಲ್ ಪಿರೇರಾ ಇವರು ಸದ್ರಿ ಅರ್ಜಿ ಜೊತೆ ಹಾಜರುಪಡಿಸಲಾದ ಮತದಾರರ ಗುರುತಿನ ಚೀಟಿ ನಂಬ್ರ:RSI2893816 ಆಗಿದ್ದು ಸದರಿ ಗುರುತಿನ ಚೀಟಿಯ ಹಿಂಭಾಗದಲ್ಲಿ ಗುರುತು ಚೀಟಿಯ ಸಂಖ್ಯೆ NUX1017961 ಆಗಿರುವುದು ಗಮನಿಸಲಾಗಿದೆ, ಅಲ್ಲದೇ ಮಂಗಳೂರು ಮಹಾನಗರ ಪಾಲಿಕೆ ನಮೂನೆ-1 (7) ಕಟ್ಟಡ ಆಸ್ತಿ ತೆರಿಗೆ ಸ್ವಯಂ ನಿರ್ಧರಣಾ ನಮೂನೆಯಲ್ಲಿ ಮಾಲೀಕರ ಹೆಸರು ಮೊನ್ನು ಮತ್ತು ಲೋಕಯ್ಯ ಎಂಬ ಹೆಸರಿನಲ್ಲಿ ಅರ್ಜಿ ಸಲ್ಲಿಸಿರುವ ದಾಖಲಾತಿಯನ್ನು ಅರ್ಜಿಯ ಜೊತೆ ಲಗತ್ತಿಸಿರುವುದು ಗಮನಿಸಲಾಗಿದೆ ಆದರಿಂದ ಸದ್ರಿ ಅರ್ಜಿ ಕೂಡಾ ಸುಳ್ಳು ಮಾಹಿತಿಯನ್ನು ನೀಡಿ ಸಲ್ಲಿಸಿರುವುದು ಕಂಡುಬರುತ್ತದೆ. ಸದರಿ ಅರ್ಜಿಗಳ

ಗ್ರಾಮಕರಣಿಕರ ತನಿಖಾ ವರದಿ ಇರುವುದಿಲ್ಲ. ಕಂದಾಯ ನಿರೀಕ್ಷಕರು ಮಂಗಳೂರು ಎ ಹೋಬಳಿ ಇವರ ವರದಿ ಲಭ್ಯವಿರುತ್ತದೆ.ಸದ್ರಿ ವರದಿಯ ಆಧಾರದ ಮೇಲೆ ತಹಶೀಲ್ದಾರರು ಮಂಗಳೂರು ಇವರು ನೀಡಿದ ಹಕ್ಕು ಪತ್ರ ಲಭ್ಯವಿರುವುದಿಲ್ಲ. 2012 ರ ಹಿಂದಿನಿಂದ ವಾಸ್ತವ್ಯ ಮಾಡುತ್ತಿರುವ ಬಗ್ಗೆ ಯಾವುದೇ ದಾಖಲೆಗಳು ಕಂಡು ಬರುವುದಿಲ್ಲ.

ಅಭಿಪ್ರಾಯ:- ಸದರಿ ಅರ್ಜಿಯು ಕಾನೂನು ಬಾಹಿರವಾಗಿ ಸಲ್ಲಿಸಿ ಅಕ್ರಮವಾಗಿ ಮಂಜೂರು ಮಾಡಲಾಗಿದೆ.

| ಕ್ರ.ಸಂ | ಅರ್ಜಿ ಸ್ವೀಕೃತಿ ಸಂಖ್ಯೆ:- | ಹೆಸರು ಮತ್ತು ವಿಳಾಸ | ಷರಾ |
|---|---|---|---|
| 1. | 240101510700351 | ಅನಿತ ,<br>ಬಿನ್ ರಂಗಯ್ಯ ಎನ್ ಕೆ,<br>ಮನೆ ನಂಬ್ರ:21-90-4 ,ಕೋಟಿಮುರ,<br>ಕುಲಶೇಖರ ,ಪದವು ಗ್ರಾಮ. | |

ಅರ್ಜಿಯ ಜೊತೆ ಲಗತ್ತಿಸಲಾದ ಪಡಿತರ ಚೀಟಿ ಸಂಖ್ಯೆ :MNGI00124147 ಇದರಲ್ಲಿ ಅರ್ಜಿದಾರರ ತಾಯಿಯ ಹೆಸರು ಸುಮಿತ್ರಾ ಸಾಲ್ಯಾನ್ ಎಂಬುದಾಗಿದ್ದು, ತಂದೆಯ ಹೆಸರು ದಾಖಲಿರುವುದಿಲ್ಲ. ಅರ್ಜಿದಾರರು ಹಾಜರುಪಡಿಸಿದ ಮನೆ ತೆರಿಗೆ ರಶೀದಿಯಲ್ಲಿ ಮೋರ್ಗರೇಟ್ ಮೊಂತೆರೋ ಮನೆ ನಂಬ್ರ :1-10-T-120/10(1) ಎಂಬುದಾಗಿ ದಾಖಲಿದ್ದು ಅರ್ಜಿದಾರರಿಗೂ ಹಾಜರುಪಡಿಸಿದ ದಾಖಲಾತಿಗೆ ಒಂದಕ್ಕೊಂದು ತಾಳೆ ಬರುವುದಿಲ್ಲ. ಮಾನ್ಯ ಲೋಕಾಯುಕ್ತ ಅಧಿಕಾರಿಯವರಿಗೆ ಸಲ್ಲಿಸಿದ ಹೇಳಿಕೆಯಂತೆ ಅರ್ಜಿದಾರರ ತಾಯಿಯ ಹೆಸರು ಶ್ರೀಮತಿ ಅಂಬಿಕಾ ಎಂಬುದಾಗಿ ತಿಳಿಸಿರುವುದನ್ನು ಗಮನಿಸಲಾಗಿದೆ. ಆದ್ದರಿಂದ ಸದರಿ ಅರ್ಜಿಯು ಸುಳ್ಳು ಮಾಹಿತಿಯಿಂದ ಕೂಡಿರುವುದಾಗಿ ಸ್ಪಷ್ಟವಾಗಿ ಕಂಡು ಬರುತ್ತದೆ. ಅಲ್ಲದೇ ಸದರಿ ಅರ್ಜಿದಾರರು ಮಂಗಳೂರು ಎ ಹೋಬಳಿ ಕಂದಾಯ ನಿರೀಕ್ಷಕರಾದ ಜೋಸೇಫ್ ವಾಲ್ಟಾಟ್ ಪಿರೇರಾ ಇವರ ಮನೆಯಲ್ಲಿ ಸುಮಾರು ಎರಡು ವರ್ಷಗಳಿಂದ ಮನೆ ಕೆಲಸ ಮಾಡಿಕೊಂಡಿರುತ್ತಾರೆ. . ಸದರಿ ಅರ್ಜಿಯಲ್ಲಿ ಗ್ರಾಮಕರಣಿಕರ ತನಿಖಾ ವರದಿ ಇರುವುದಿಲ್ಲ. ಕಂದಾಯ ನಿರೀಕ್ಷಕರು ಮಂಗಳೂರು ಎ ಹೋಬಳಿ ಇವರ ವರದಿ ಲಭ್ಯವಿರುತ್ತದೆ.ಸದ್ರಿ ವರದಿಯ ಆಧಾರದ ಮೇಲೆ ತಹಶೀಲ್ದಾರರು ಮಂಗಳೂರು ಇವರು ನೀಡಿದ ಹಕ್ಕು ಪತ್ರ ಲಭ್ಯವಿರುತ್ತದೆ. 2012 ರ ಹಿಂದಿನಿಂದ ವಾಸ್ತವ್ಯ ಮಾಡುತ್ತಿರುವ ಬಗ್ಗೆ ಯಾವುದೇ ದಾಖಲೆಗಳು ಕಂಡು ಬರುವುದಿಲ್ಲ.

ಅಭಿಪ್ರಾಯ:- ಸದರಿ ಅರ್ಜಿಯು ಕಾನೂನು ಬಾಹಿರವಾಗಿ ಸಲ್ಲಿಸಿ ಅಕ್ರಮವಾಗಿ ಮಂಜೂರು ಮಾಡಲಾಗಿದೆ.

| ಕ್ರ.ಸಂ | ಅರ್ಜಿ ಸ್ವೀಕೃತಿ ಸಂಖ್ಯೆ:- | ಹೆಸರು ಮತ್ತು ವಿಳಾಸ | ಷರಾ |
|---|---|---|---|
| 1. | 240101517900002 | ರೋಸ್ಲಿ ಶಾಂತಿ ಕುಮಾರಿ<br>ಕೋಂ ರೋಬರ್ಟ್ ದೇವದಾಸ ,<br>ಮನೆ ನಂಬ್ರ: 2-21-1625-1 ಮಾರ್ಟಿನ್ ಪಾಯಸ್ ರೋಡ್ ,ಕರಾವಳಿ ಎಕ್ಸಿಬ್ಯುಸನ್ ಮೈದಾನ ಬಳಿ,ಕೊಡಿಯಾಲ್ ಬೈಲ್. | |

ಅರ್ಜಿದಾರರು ಅರ್ಜಿಯ ಜೊತೆ 3483 3767 6100 ರ ಆಧಾರ್ ಪ್ರತಿಯನ್ನು ಹಾಜರುಪಡಿಸಿದ್ದು, ಸದರಿ ಹಾಜರುಪಡಿಸಿದ ದಾಖಲಾತಿಯಲ್ಲಿ ವಿಳಾಸವು C/O ಮೈಕಲ್ ಡಿ ಸೋಜ ರವರ ವಿಳಾಸವಾಗಿರುವುದು ಕಂಡು ಬರುತ್ತದೆ. ಸದರಿ ಆಧಾರ್ ಕಾರ್ಡನ್ನು ದಿ:07-12-2013 ರಂದು ಪಡೆದುಕೊಂಡಿರುತ್ತಾರೆ. ಮಂಗಳೂರು ಮಹಾನಗರ ಪಾಲಿಕೆ ನಮೂನೆ-1 (7) ಕಟ್ಟಡ ಆಸ್ತಿ ತೆರಿಗೆ ಸ್ವಯಂ ನಿರ್ಧರಣಾ ನಮೂನೆಯಲ್ಲಿ ಮಾಲೀಕರ ಹೆಸರು ಸಿ.ಎಸ್.ಆರ್ ಮೈಕಲ್ ಎಂಬ ಹೆಸರಿನಲ್ಲಿ ಅರ್ಜಿ ಸಲ್ಲಿಸಿರುವ ದಾಖಲಾತಿಯನ್ನು ಅರ್ಜಿಯ ಜೊತೆ ಲಗತ್ತಿಸಿರುವುದು ಗಮನಿಸಲಾಗಿದೆ.ಸದರಿ ಅರ್ಜಿ ಕೂಡಾ ಸುಳ್ಳು ದಾಖಲಾತಿಗಳನ್ನು ನೀಡಿ ಅರ್ಜಿ ಸಲ್ಲಿಸಿರುವುದು ಸ್ಪಷ್ಟವಾಗಿ ಕಂಡು ಬರುತ್ತದೆ. ಮೇಲಿನ ಅರ್ಜಿಗಳಲ್ಲಿ ವ್ಯಾಸ್ತವ್ಯದ ಬಗ್ಗೆ ಸಲ್ಲಿಸಿರುವ ದಾಖಲಾತಿಗಳು 2012 ರ ನಂತರ ಮಾಡಿಸಿರುವ ದಾಖಲಾತಿಗಳಾಗಿರುತ್ತದೆ. . ಸದರಿ ಅರ್ಜಿಯಲ್ಲಿ ಗ್ರಾಮಕರಣಿಕರ ಹಾಗೂ ಕಂದಾಯ ನಿರೀಕ್ಷಕರು ಮಂಗಳೂರು ಎ ಹೋಬಳಿ ಇವರ ವರದಿ ಲಭ್ಯವಿರುವುದಿಲ್ಲ.ಆದರೆ ತಹಶೀಲ್ದಾರರು ಮಂಗಳೂರು ಇವರು ನೀಡಿದ ಹಕ್ಕು ಪತ್ರ ಲಭ್ಯವಿರುತ್ತದೆ. 2012 ರ ಹಿಂದಿನಿಂದ ವಾಸ್ತವ್ಯ ಮಾಡುತ್ತಿರುವ ಬಗ್ಗೆ ಯಾವುದೇ ದಾಖಲೆಗಳು ಕಂಡು ಬರುವುದಿಲ್ಲ.

<u>ಅಭಿಪ್ರಾಯ</u>:- ಸದರಿ ಅರ್ಜಿಯು ಕಾನೂನು ಬಾಹಿರವಾಗಿ ಸಲ್ಲಿಸಿ ಅಕ್ರಮವಾಗಿ ಮಂಜೂರು ಮಾಡಲಾಗಿದೆ.

| ಕ್ರ.ಸಂ | ಅರ್ಜಿ ಸ್ವೀಕೃತಿ ಸಂಖ್ಯೆ:- | ಹೆಸರು ಮತ್ತು ವಿಳಾಸ | ಷರಾ |
|---|---|---|---|
| 1. | 240101510700339 | ಮೋಹನ ಗೌಡ,<br>ಬಿನ್ ದಾಸಪ್ಪ ಗೌಡ,<br>ಮನೆ ನಂಬ್ರ:21-140-1 ಕೋಟಿಮುರ ಪಡವು ಗ್ರಾಮ. | ರಮೇಶ್ ಗ್ರಾಮಸಹಾಯಕ ,ಇವರ ಸಹೋದರ. |

ಮೋಹನ ಗೌಡ ಇವರು ಸಲ್ಲಿಸಿದ ಆಧಾರ್ ಸಂಖ್ಯೆ 9101 9097 8679 ರಲ್ಲಿ ವಿಳಾಸ 2-15-1294 ಲೂಸಿ ಲಸ್ರಾಡೋ ಕಂಪೌಂಡ್, ಬಾಳಿಗ ಸ್ಟೋರ್ ನ ಹತ್ತಿರ ಬಿಜೈ ,ಮಂಗಳೂರು ಎಂಬುದಾಗಿ ದಾಖಲಿದ್ದು, ಸದರಿ ಆಧಾರನ್ನು ದಿ:19/02/2014 ಪಡಕೊಂಡಿರುವುದಾಗಿದೆ. . ಸದರಿ ಅರ್ಜಿಯಲ್ಲಿ ಗ್ರಾಮಕರಣಿಕರ ತನಿಖಾ ವರದಿ ಇರುವುದಿಲ್ಲ, ಕಂದಾಯ ನಿರೀಕ್ಷಕರು ಮಂಗಳೂರು ಎ ಹೋಬಳಿ ಇವರ ವರದಿ ಲಭ್ಯವಿರುತ್ತದೆ.ಸದ್ರಿ ವರದಿಯ ಆಧಾರದ ಮೇಲೆ ತಹಶೀಲ್ದಾರರು ಮಂಗಳೂರು ಇವರು ನೀಡಿದ ಹಕ್ಕು ಪತ್ರ ಲಭ್ಯವಿರುತ್ತದೆ. 2012 ರ ಹಿಂದಿನಿಂದ ವಾಸ್ತವ್ಯ ಮಾಡುತ್ತಿರುವ ಬಗ್ಗೆ ಯಾವುದೇ ದಾಖಲೆಗಳು ಕಂಡು ಬರುವುದಿಲ್ಲ.

ಅಭಿಪ್ರಾಯ:- ಸದರಿ ಅರ್ಜಿಯು ಕಾನೂನು ಬಾಹಿರವಾಗಿ ಸಲ್ಲಿಸಿ ಅಕ್ರಮವಾಗಿ ಮಂಜೂರು ಮಾಡಲಾಗಿದೆ.

| ಕ್ರ.ಸಂ | ಅರ್ಜಿ ಸ್ವೀಕೃತಿ ಸಂಖ್ಯೆ:- | ಹೆಸರು ಮತ್ತು ವಿಳಾಸ | ಷರಾ |
|---|---|---|---|
| 2. | 240101510700356 | ನಮಿತಾ ಎಂ ಗೌಡ , ಬಿನ್ ಮೋಹನ ಎಂ ಗೌಡ, ಮನೆ ನಂಬ್ರ:12-6-1 ನೀತಿನಗರ ,ಶಕ್ತಿ ನಗರ, ಪದವು ಕುಲಶೇಖರ. | ರಮೇಶ್ ಗ್ರಾಮಸಹಾಯಕ ,ಇವರ ಸಹೋದರ ಮೋಹನ ಗೌಡ ಇವರ ಪತ್ನಿ. |

ಮೇಲ್ಕಾಣಿಸಿದ ಅರ್ಜಿಯ ಬಗ್ಗೆ ಪರಿಶೀಲನೆ ನಡೆಸಲಾಗಿ ಅರ್ಜಿಯಲ್ಲಿ ಅರ್ಜಿದಾರರ ಸಹಿ ಇರುವುದಿಲ್ಲ.ನಮಿತಾ ಎಂ ಗೌಡ ಹಾಜರುಪಡಿಸಿದ ಮತದಾರರ ಗುರುತಿನ ಚೀಟಿ NUX4240842 ರಲ್ಲಿರುವ ವಿಳಾಸ 2-15-1294 ಲೂಸಿ ಲಸ್ರಾಡೋ ಕಂಪೌಂಡ್, ಬಾಳಿಗ ಸ್ಟೋರ್ ನ ಹತ್ತಿರ ಬಿಜೈ, ಮಂಗಳೂರು ಎಂಬುದಾಗಿರುತ್ತದೆ. ಅರ್ಜಿದಾರರು ಹಾಜರು ಪಡಿಸಿದ ಮಂಗಳೂರು ಮಹಾನಗರ ಪಾಲಿಕೆ ನಮೂನೆ-1 (7) ಕಟ್ಟಡ ಆಸ್ತಿ ತೆರಿಗೆ ಸ್ವಯಂ ನಿರ್ಧರಣಾ ನಮೂನೆಯಲ್ಲಿ ಮಾಲೀಕರ ಹೆಸರು ಅಶೋಕ ಎಂಬ ಹೆಸರಿನಲ್ಲಿ ಅರ್ಜಿ ಸಲ್ಲಿಸಿರುವ ದಾಖಲಾತಿಯನ್ನು ಅರ್ಜಿಯ ಜೊತೆ ಲಗತ್ತಿಸಿರುವುದು ಗಮನಿಸಲಾಗಿದೆ. ಮೇಲಿನ ಅರ್ಜಿಗಳಲ್ಲಿ ವ್ಯಾಸ್ತವ್ಯದ ಬಗ್ಗೆ ಸಲ್ಲಿಸಿರುವ ದಾಖಲಾತಿಗಳು 2012 ರ ನಂತರ ಮಾಡಿಸಿರುವ ದಾಖಲಾತಿಗಳಾಗಿರುತ್ತದೆ. . ಸದರಿ ಅರ್ಜಿಯಲ್ಲಿ ಗ್ರಾಮಕರಣಿಕರ ತನಿಖಾ ವರದಿ ಇರುವುದಿಲ್ಲ, ಕಂದಾಯ ನಿರೀಕ್ಷಕರು ಮಂಗಳೂರು ಎ ಹೋಬಳಿ ಇವರ ವರದಿ ಲಭ್ಯವಿರುತ್ತದೆ.ಸದ್ರಿ ವರದಿಯ ಆಧಾರದ ಮೇಲೆ ತಹಶೀಲ್ದಾರರು ಮಂಗಳೂರು ಇವರು ನೀಡಿದ ಹಕ್ಕು ಪತ್ರ ಲಭ್ಯವಿರುತ್ತದೆ. 2012 ರ ಹಿಂದಿನಿಂದ ವಾಸ್ತವ್ಯ ಮಾಡುತ್ತಿರುವ ಬಗ್ಗೆ ಯಾವುದೇ ದಾಖಲೆಗಳು ಕಂಡು ಬರುವುದಿಲ್ಲ.

ಮೋಹನ ಗೌಡ ಮತ್ತು ನಮಿತಾ ಎಂ ಗೌಡ ಇವರು ಪತಿ ಪತ್ನಿಯಾಗಿರುತ್ತಾರೆ.ಮೋಹನ ಗೌಡ ಮತ್ತು ನಮಿತಾ ಗೌಡ ಇವರು ಅರ್ಜಿಯ ಜೊತೆ ಲಗತ್ತಿಸಿರುವ ಮನೆಯ ಭಾವಚಿತ್ರ ಒಂದೇ ಯಾಗಿರುತ್ತದೆ.

ಅಭಿಪ್ರಾಯ:- ಸದರಿ ಅರ್ಜಿಯು ಕಾನೂನು ಬಾಹಿರವಾಗಿ ಸಲ್ಲಿಸಿ ಅಕ್ರಮವಾಗಿ ಮಂಜೂರು ಮಾಡಲಾಗಿದೆ.

ಈ ಮೇಲಿನ ಎಲ್ಲಾ ಅರ್ಜಿಗಳನ್ನು ಪರಿಶೀಲಿಸಲಾಗಿ ಅರ್ಜಿಗಳಿಗೂ, ಅದರೊಂದಿಗೆ ಲಗ್ತೀಕರಿಸಲಾದ ದಾಖಲಾತಿಗಳಿಗೂ ಒಂದಕ್ಕೊಂದು ತಾಳೆ ಇಲ್ಲದಿರುವುದನ್ನು ಗಮನಿಸಲಾಗಿದೆ. ಸದರಿ ಅರ್ಜಿಗಳನ್ನು ಪರಿಶೀಲನೆ ಸಮಯದಲ್ಲಿ ಸಂಬಂಧಪಟ್ಟ ಗ್ರಾಮಗಳ ಗ್ರಾಮಕರಣಿಕರ ಯಾವುದೇ ತನಿಖಾ ವರದಿಗಳು ಇರುವುದಿಲ್ಲ ಮತ್ತು ಭೂ ಕಂದಾಯ ಕಾಯ್ದೆ 1964 ರ ಕಲಂ 94 ಸಿಸಿ ರಡಿಯಲ್ಲಿ ದಿ:01-01-2012 ರ ಪೂರ್ವದಲ್ಲಿ ಗ್ರಾಮೀಣ ಮತ್ತು ನಗರ ಪ್ರದೇಶಗಳ ಸರ್ಕಾರಿ ಜಮೀನುಗಳಲ್ಲಿ ವಾಸದ ಮನೆ ನಿರ್ಮಿಸಿರುವುದನ್ನು ಸಕ್ರಮಗೊಳಿಸುವಂತೆ ನೀಡಲಾದ ನಿರ್ದೇಶನವನ್ನು ಪಾಲಿಸದೇ ಇರುವುದು ಕಂಡುಬರುತ್ತದೆ. ಆದುದರಿಂದ ಸದರಿ ವಿಚಾರದ ಬಗ್ಗೆ ಮೇಲೆ ನೀಡಲಾದ ಎಲ್ಲಾ ಮಂಜೂರಾತಿಗಳು ಅಕ್ರಮವಾಗಿರುತ್ತದೆ. ಮಂಜೂರಾಗಿರುವ ಪ್ರಕರಣಗಳಲ್ಲಿ ನಿಯಮಾನುಸಾರ ಮಂಜೂರಾತಿ ಪ್ರಕ್ರಿಯೇ ನಡೆಸಲಾಗಿರುವುದಿಲ್ಲ. ಸದರಿ ಪ್ರಕರಣದಲ್ಲಿ 1.ಟಿ.ಜಿ ಗುರುಪ್ರಸಾದ್ ತಹಶೀಲ್ದಾರರು, ಮಂಗಳೂರು ತಾಲೂಕು, 2. ಜೋಸೆಫ್ ವಾಲ್ಟಾಟ್ ಪಿರೇರಾ ಕಂದಾಯ ನಿರೀಕ್ಷಕರು, ಮಂಗಳೂರು ಎ ಹೋಬಳಿ, 3.ರಮೇಶ್, ಗ್ರಾಮ ಸಹಾಯಕ (ಪ್ರಸ್ತುತ ಕಂದಾಯ ನಿರೀಕ್ಷಕರ ಕಚೇರಿ ಮಂಗಳೂರು ಎ ಹೋಬಳಿ) ಸದರಿ ಅಧಿಕಾರಿ / ನೌಕರರ ವಿರುದ್ಧ ಅಭಿಯೋಜನೆ ಮಂಜೂರಾತಿ ನೀಡುವ ಬಗ್ಗೆ ಮೇಲ್ಕಂಡಂತೆ ಅಭಿಪ್ರಾಯ ಪಡಲಾಗಿದೆ. ನಕಲಿ ದಾಖಲಾತಿಗಳನ್ನು ಸೃಷ್ಟಿಸಿ ಅನರ್ಹ ವ್ಯಕ್ತಿಗಳ ಹೆಸರಿನಲ್ಲಿ ಅಮೂಲ್ಯವಾದ ಸರ್ಕಾರಿ ಜಮೀನುಗಳನ್ನು ಅಕ್ರಮವಾಗಿ ಮಂಜೂರು ಮಾಡಿಸಿಕೊಳ್ಳಲು ಪ್ರಯತ್ನಪಟ್ಟ ಮೇಲ್ಕಂಡ ಅಧಿಕಾರಿಗಳು ಹಾಗೂ ನೌಕರರ ವಿರುದ್ಧ ಕಾನೂನಿನಂತೆ ಸೂಕ್ತ ಕ್ರಮ ಕೈಗೊಳ್ಳುವ ಬಗ್ಗೆ ನನ್ನ ಅಭಿಪ್ರಾಯದೊಂದಿಗೆ ವರದಿಯನ್ನು ಮುಂದಿನ ಕ್ರಮಕ್ಕಾಗಿ ಸಲ್ಲಿಸಿದೆ.

ತಮ್ಮ ವಿಶ್ವಾಸಿ,

ಸಹಾಯಕ ಆಯುಕ್ತರು
ಸಹಾಯಕ ಆಯುಕ್ತರು
ಮಂಗಳೂರು ಉಪವಿಭಾಗ, ಮಂಗಳೂರು

17. As per the said report and also the report dtd:20-7-2019 of the Tahasildar, Mangalore Taluk, the issuance of Hakkupatras under Sec.94 (C,C) of KLR Act, in respect of 9 applicants are illegal and against the rules. The report further indicates that, there is a fraud laid by the Village Accountant, RI., with regard to issuance of Hakkupatras U/Sec. 94(C,C), accordingly, the said Hakkupatras have been cancelled. The possession of the house constructed by one Smt.Sowmya R.N., has also been recovered to the Government. The report further discloses that, the A.C., has been examining the documents in respect of all the applications filed U/Sec. 94(C) and 94(C,C) of KLR Act and after receipt of full report, further report will be submitted. The Dy. Commissioner, has sought 3 months time to submit the further status report.

18. Since the Dy. Commissioner has sought 3 months time to complete the enquiry in respect of all the Hakkupatras issued U/Sec. 94 (C) & 94 (C,C) of KLR Act, 3 months' time may be granted to the Dy. Commissioner, Dakshina Kannada District, to submit the comprehensive report. If approved, reminder will be issued to the Dy. Commissioner, Mangaluru, to submit the further action taken report by 25-10-2019.

Submitted for kind orders of your Lordship.

31/7/19
**ARE-6**

**19) Hon'ble Lokayukta)**

Approved
[signature]
2/8/2019

[initials] 3/8/19

Complied para
[initials]

20. ARE6
25.10.19
Rd letter dated: 26.7.19
from DC D.K. [illegible]

## Note

Perused. I move the
Reminder to the
D.C. D.K. Mangaluru
to submit the further
action taken report
by 18/12/19

[initials] 5/10
ARE-6

Complied para
[initials]

21. ARE6
18-12-19
D C ಅವರ ಪತ್ರ [illegible]

No.Lok/Mys/1184/2019/ARE-6 Date:18-12-2019

**NOTE**

21) Regular ARE-6 is on leave.

22) We have not received the report from the Dy. Commissioner, Dakshina Kannada District, Mangaluru, inspite of reminder. Hence, await report, by 13-01-2020.

***ARE-6 (I/c)***

22. ARE8
13-01-2020
DC [illegible]
[illegible] 16.12.2019[illegible]
[illegible]

Date:13-01-2020

**NOTE**

We have received the letter dtd:16-12-2019 from the Dy. Commissioner, Dakshina Kannada District, Mangaluru. The said letter reads here as under;

-26-

13.01.2020

ಜಿಲ್ಲಾಧಿಕಾರಿ ಹಾಗೂ ಜಿಲ್ಲಾ
ದಂಡಾಧಿಕಾರಿಯವರ ಕಾರ್ಯಾಲಯ,
ದಕ್ಷಿಣ ಕನ್ನಡ ಜಿಲ್ಲೆ,
ಮಂಗಳೂರು – 575 001.

ಕರ್ನಾಟಕ ಸರಕಾರ
(ಕಂದಾಯ ಇಲಾಖೆ)

Deputy Commissioner
District Magistrate's Office,
Dakshina Kannada District,
Mangaluru – 575 001.

ಸಂ: ಎಲ್.ಎನ್.ಡಿ. (2ಬಿ)ಸಿಆರ್/01/2019/ಬಿ7

ದಿನಾಂಕ : 16.12.2019

ಅಪರ ನಿಬಂಧಕರು, ವಿಚಾರಣೆ - 6,
ಕರ್ನಾಟಕ ಲೋಕಾಯುಕ್ತ, ಬೆಂಗಳೂರು - ಇವರಿಗೆ

ಮಾನ್ಯರೇ,

ವಿಷಯ : ಮಂಗಳೂರು ತಾಲೂಕಿನ ಕೊಡಿಯಾಲ್ ಬೈಲ್, ಪದವು, ಜಪ್ಪಿನ ಮೊಗರು ವಸತಿ ಸ್ಥಳದಲ್ಲಿ ಮಂಗಳೂರು ತಾಲೂಕಿನ ಕಂದಾಯ ಅಧಿಕಾರಿಗಳು ಸರ್ಕಾರಿ ಜಮೀನನ್ನು ಕಾನೂನು ಬಾಹಿರವಾಗಿ 94 ಸಿಸಿ ರಡಿಯಲ್ಲಿ ಅನರ್ಹ ಫಲಾನುಭವಿಗಳಿಗೆ ಮಂಜೂರು ಮಾಡಿ ಹಕ್ಕು ಪತ್ರ ವಿತರಿಸಿದ ಕುರಿತು ಸಲ್ಲಿಸಲಾದ ದೂರು ಅರ್ಜಿಯ ಬಗ್ಗೆ ತನಿಖಾ ವರದಿಯನ್ನು ಸಲ್ಲಿಸುವ ಕುರಿತು.

ಉಲ್ಲೇಖ : 1) ಅಪರ ನಿಬಂಧಕರು, ವಿಚಾರಣೆಗಳೂ – 6, ಕರ್ನಾಟಕ ಲೋಕಾಯುಕ್ತ, ಬೆಂಗಳೂರು ಪತ್ರ ಸಂಖ್ಯೆ : ಕಂಪ್ಲೇಂಟ್ / ಲೋಕ್ / ಎಂ ವೈ ಎಸ್ / 1184 / 2019 ಎ.ಆರ್.ಇ – 6. ದಿನಾಂಕ : 03/05/2019.

2) ಸಹಾಯಕ ಆಯುಕ್ತರು, ಮಂಗಳೂರು ಇವರ ತನಿಖಾ ವರದಿ ಸಂಖ್ಯೆ : ಇ.ಎಸ.ಟಿ. (1) ಸಿ.ಆರ್/43/2019-20 ; ದಿನಾಂಕ : 15/05/2019.

M4||

3) ಈ ಕಛೇರಿಯ ಸಮಸಂಖ್ಯೆ ಪತ್ರದಂತೆ ಮಾನ್ಯ ಲೋಕಾಯುಕ್ತರಿಗೆ ಸಲ್ಲಿಸಿರುವ ವರದಿ ದಿನಾಂಕ : 26/07/2019.

4) ಅಪರ ನಿಬಂಧಕರು, ವಿಚಾರಣೆಗಳೂ – 6, ಕರ್ನಾಟಕ ಲೋಕಾಯುಕ್ತ, ಬೆಂಗಳೂರು ಪತ್ರ ಸಂಖ್ಯೆ : ಕಂಪ್ಲೇಂಟ್ / ಲೋಕ್ / ಎಂ ವೈ ಎಸ್ / 1184 / 2019 ಎ.ಆರ್.ಇ – 6. ದಿನಾಂಕ : 16/09/2019.

5) ಸಹಾಯಕ ಆಯುಕ್ತರು, ಮಂಗಳೂರು ಇವರ ತನಿಖಾ ವರದಿ ಸಂಖ್ಯೆ : ಇ.ಎಸ.ಟಿ. (1) ಸಿ.ಆರ್/43/2019-20 ; ದಿನಾಂಕ : 15/05/2019.

6) ಈ ಕಛೇರಿಯ ಸಮಸಂಖ್ಯೆ ಪತ್ರದಂತೆ ಮಾನ್ಯ ಲೋಕಾಯುಕ್ತರಿಗೆ ಸಲ್ಲಿಸಿರುವ ವರದಿ ದಿನಾಂಕ : 25/10/2019.

7) ಅಪರ ನಿಬಂಧಕರು, ವಿಚಾರಣೆಗಳೂ – 6, ಕರ್ನಾಟಕ ಲೋಕಾಯುಕ್ತ, ಬೆಂಗಳೂರು ಪತ್ರ ಸಂಖ್ಯೆ : ಕಂಪ್ಲೇಂಟ್ / ಲೋಕ್ / ಎಂ ವೈ ಎಸ್ / 1184 / 2019 ಎ.ಆರ್.ಇ – 6. ದಿನಾಂಕ : 03/05/2019.

*****@*****

ಮೇಲಿನ ವಿಷಯಕ್ಕೆ ಸಂಬಂಧಿಸಿದಂತೆ, ಮಂಗಳೂರು ತಾಲೂಕಿನ ಕೊಡಿಯಾಲ್ ಬೈಲ್, ಪದವು, ಬಪ್ಪಿನಮೊಗರು ವಸತಿ ಸ್ಥಳದಲ್ಲಿ ಮಂಗಳೂರು ತಾಲೂಕಿನ ಕಂದಾಯ ಅಧಿಕಾರಿಗಳು ಸರ್ಕಾರಿ ಜಮೀನನ್ನು ಕಾನೂನು ಬಾಹಿರವಾಗಿ 94 ಸಿಸಿ ರಡಿಯಲ್ಲಿ ಅನರ್ಹ ಫಲಾನುಭವಿಗಳಿಗೆ ಮಂಜೂರು ಮಾಡಿ ಹಕ್ಕು ಪತ್ರ ವಿತರಿಸಿದ ಕುರಿತು ಸಲ್ಲಿಸಲಾದ ದೂರು ಅರ್ಜಿಯ ವಿಚಾರದಲ್ಲಿ ಮಾನ್ಯ ಲೋಕಾಯುಕ್ತರು ಬೆಂಗಳೂರು ಇವರು ಉಲ್ಲೇಖ (1) ಪತ್ರದಲ್ಲಿ ಕೋರಿರುವಂತೆ, ಉಲ್ಲೇಖ (3) ರ ಪತ್ರದಲ್ಲಿ ವರದಿಯನ್ನು ಸಲ್ಲಿಸಿದ್ದು, ಎಲ್ಲಾ ಮಂಜೂರಾತಿ ಕಡತಗಳಲ್ಲಿ ತನಿಖೆಯನ್ನು ಅಂತಿಮಗೊಳಿಸಿ ವರದಿಯನ್ನು ನೀಡಲು ಕಾಲಾವಕಾಶ ಅಗತ್ಯವಿರುವುದರಿಂದ, ಕನಿಷ್ಠ 3 ತಿಂಗಳ ಕಾಲಾವಾಶ ನೀಡುವಂತೆ ಕೋರಲಾಗಿತ್ತು.

ಆದರೆ, ಈ ಜಿಲ್ಲೆಯಲ್ಲಿ ಕಲಂ 94 ಸಿಸಿ ರಡಿ ಒಟ್ಟು 23,609 ಮಂಜೂರಾತಿ ಪ್ರಕರಣಗಳಿದ್ದು, ಈ ಎಲ್ಲಾ ಮಂಜೂರಾತಿ ಪ್ರಕರಣಗಳನ್ನು ತನಿಖೆ ನಡೆಸಿ ಪಾಲನಾ ವರದಿ ಸಲ್ಲಿಸಲು ಇನ್ನೂ ಕನಿಷ್ಠ 6 ತಿಂಗಳ ಕಾಲಾವಕಾಶ ನೀಡುವಂತೆ ಈಗಾಗಲೇ ಉಲ್ಲೇಖ (6) ರಂತೆ ಕೋರಲಾಗಿರುತ್ತದೆ ಎಂಬ ಅಂಶವನ್ನು ಮತ್ತೊಮ್ಮೆ ತಮ್ಮ ದಯಾಪರ ಅವಗಾಹನೆಗೆ ಸಲ್ಲಿಸಿದೆ.

ತಮ್ಮ ನಂಬುಗೆಯ,

ಜಿಲ್ಲಾಧಿಕಾರಿ,

ದಕ್ಷಿಣ ಕನ್ನಡ ಜಿಲ್ಲೆ, ಮಂಗಳೂರು.

23) The Dy. Commissioner has sought for 6 months time to submit the comprehensive report, as there are 23,609 cases relating to issuance of hakkupathras u/Sec.94 (C,C) of KLR Act. Having regard to the reasons assigned, initially 4 months time may be granted to the Dy. Commissioner, Dakshina Kannada District, Mangaluru, to submit the status report with regard to some cases. If approved, such letter will be addressed to the Dy. Commissioner, Dakshina

Kannada District, to submit the status report, by 30-01-2020.

Submitted for kind orders of your Lordship.

13/1/2020
**ARE-6**

***24) Hon'ble Lokayukta)***

Approved
16/1/2020

17/1

Complied

20 ARE6

COVID-19

## Note

Perused. Due to lock down the office has placed the file today.

Issue Reminder to submit the report by 20/8/2020

28/5
ARE-6

Complied

26) AREG
20-08-20
DC [illegible]
[illegible]

ARE-6 is on leave
Await Report of
O-C monthly
18/10
[signature] 20/08

27) AREG
19.10.2020
[illegible]
[illegible]

Persued. Issue
Reminders to submit
the [illegible] action
taken report by
14/12/2020.
[signature] 19/10
ARE-6

28) AREG
14-12-2020
DC [illegible]
[illegible]

No.Lok/Mys/1184/2019/ARE-6 Date:15-12-2020

**NOTE**

28) We have not received the further action taken report from the Dy. Commissioner, Dakshina Kannada District. However, one more reminder may kindly be ordered to the Dy. Commissioner, Dakshina Kannada District, to submit the further action taken report, before the next date, failing which, the Dy. Commissioner may be directed to depute any responsible official to be present on the next date, to submit the explanation for the delay in submitting the report and also the action taken report, by 3-2-2021.

Submitted for kind orders of your Lordship.

M 15/12

***ARE-6***

***29) Hon'ble Lokayukta)***

Approved

16/12/2020

M 16/12

Complied

30) ARE 6

03.02.2021

Perused. One more reminder to submit the ATR by 29/3/2021

M 3/2

ARE 6

Complied

31) ARE-6

29-03-2021
ಜ್ಞಾಪನ
D.C. ಬೆ.ನಗರ ಜಿಲ್ಲೆ
[illegible]

Perused. Issue Reminder to the D.C to submit the F/status report by 17/5/2021

29/3
AR E-6

Complied